ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 21 RNI Number : KNKAN/25/A2770 23-01-2026 Friday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :21 ರಾಯಚೂರು 23-01-2026 ಶುಕ್ರವಾರ ಪುಟ 04 ಬೆಲೆ ರೂ.2/- ಮೊ:8660146563

ಕಾಂಗ್ರೆಸ್‌ನವರು ಯೋಜನೆಯ ಹೆಸರು ಬದಲಾವಣೆ ಮಾಡಿದರೆ ಪುಣ್ಯ, ನಾವು ಮಾಡಿದರೆ ಪಾಪನಾ? ಕೇಂದ್ರ ಸಚಿವರ ಪ್ರಶ್ನೆ

ಬೆಂಗಳೂರು,ಜ.22-

ವಿಬಿ ಜಿ ರಾಮ್ ಜೀ ಯೋಜನೆಯಿಂದಾಗಿ ಭ್ರಷ್ಟಾಚಾರದ ಅಂಗಡಿ ಮುಚ್ಚಲಿದೆ ಎಂಬ ಹತಾಶೆ ಭಾವನೆ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಕಾಡುತ್ತಿದೆ. ಸಿಎಂ ಸಿದ್ದರಾಮಯ್ಯ ಸರ್ಕಾರದಲ್ಲಿ ಎರಡು ಸ್ಟೇರಿಂಗ್‌ಗಳಿವೆ. ಆದರೆ, ಇಂಜಿನ್ ಕಾಣೆಯಾಗಿದೆ. ಇದರಿಂದ ಅಭಿವೃದ್ಧಿ ಯೋಜನೆಗಳಿಗೆ ಹಿನ್ನೆಡೆಯಾಗಿದೆ ಎಂದು ಕೇಂದ್ರ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆ ಸಚಿವ ಶಿವರಾಜ್ ಸಿಂಗ್ ಚೌಹಾಣ್ ವ್ಯಂಗ್ಯವಾಡಿದ್ದಾರೆ.

ಮನರೇಗಾ ರದ್ದುಗೊಳಿಸಿ ಕೇಂದ್ರ ಜಾರಿ ತಂದಿರುವ ವಿಬಿ ಜಿ ರಾಮ್ ಜೀ ಯೋಜನೆ ಬಗ್ಗೆ ಮೈತ್ರಿಕೂಟದ ಎಲ್ಲಾ ಶಾಸಕರಿಗೆ ಹಮ್ಮಿಕೊಂಡಿದ್ದ ಕಾರ್ಯಾಗಾರಕ್ಕೂ ಮುನ್ನ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು.

ರಾಮ್ ಜೀ ಯೋಜನೆಯಿಂದಾಗಿ ಕಾಂಗ್ರೆಸ್ ಭ್ರಷ್ಟಾಚಾರದ ಅಂಗಡಿ ಮುಚ್ಚಲಿದೆ ಎಂಬ ಆತಂಕ ಕಾಡುತ್ತಿದೆ. ಈಗಿನ ಸರ್ಕಾರದಲ್ಲಿ ಕುರ್ಚಿ ಕಾದಾಟದಿಂದಾಗಿ ಎರಡು ಸ್ಟೇರಿಂಗ್ ಇದ್ದು ಇಂಜಿನ್ ಇಲ್ಲವಾಗಿದೆ. ಹೀಗಾಗಿ ರಾಮ್ ಜೀ ಕೆಲಸದ ಗ್ಯಾರಂಟಿ ನೀಡಿದ್ದರೂ ಸಿದ್ದರಾಮಯ್ಯ ಅವರಿಗೆ ಅರ್ಥ ಆಗುತ್ತಿಲ್ಲ ಎಂದರು.

ಮನರೇಗಾಯಲ್ಲಿ ಅಗುತ್ತಿದ್ದ ಭ್ರಷ್ಟಾಚಾರ ನಿಯಂತ್ರಿಸಲು ಹಾಗೂ ಕೂಲಿ ಗರಿಷ್ಠ 125 ದಿನಗಳ ಕಾಲ ಕೆಲಸ ನೀಡಿ ಹೆಚ್ಚಿನ ಕೂಲಿ ಸಿಗುವಂತೆ ರಾಮ್ ಜೀ ಯೋಜನೆಯನ್ನ ಜಾರಿ ತರಲಾಗಿದೆ. ಕಾಂಗ್ರೆಸ್ ಐಡಿಯಾ, ಐಡಿಯಾಲಜಿ, ಐಡಿಯಾಲಜಿಕಲ್ ಮೂರನ್ನೂ ಬಿಟ್ಟಿದೆ. ಐಡಿಯಾ ಬಿಟ್ಟು ಕರ್ನಾಟಕದಲ್ಲಿ ಪೇಲ್ಯೂರ್ ಆಗಿದೆ. ಐಡಿಯಾಲಜಿ ಬಿಟ್ಟು ಮಹಾತ್ಮ ಗಾಂಧಿ ಸಿದ್ಧಾಂತವನ್ನೇ ಮರೆತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇಂದು ಕರ್ನಾಟಕದ ಜಂಟಿ ಅಧಿವೇಶನದಲ್ಲಿ ಆದ ಘಟನೆಯು ಪ್ರಜಾಪ್ರಭುತ್ವದ ಮರ್ಯಾದೆ ಹೋಗಿದೆ. ರಾಜ್ಯಪಾಲರ ಭಾಷಣ ಓದುವುದೇ ಅಸಾಧ್ಯವಾಗಿತ್ತು. ಮನರೇಗಾ ವಿಚಾರದಲ್ಲಿ ಕಾಂಗ್ರೆಸ್ ಸುಳ್ಳು ಹೇಳುತ್ತಿದೆ. ಈ ಮೂಲಕ ಸುಳ್ಳಿನ ಯಂತ್ರದಂತಾಗಿದೆ. ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಕೇಂದ್ರದ ಮೇಲೆ ಬೊಟ್ಟು ಮಾಡಿದೆ ಎಂದರು.



ಮನಾರೇಗಾ ಯೋಜನೆ ಸಂಬಂಧ ಯಾದಗಿರಿಯಲ್ಲಿ ಪುರುಷರು ಮಹಿಳೆಯರ ರೀತಿ ವೇಷಧರಿಸಿ ಕೆಲಸ ಮಾಡಿರುವ ಪೋಟೋ ಬಿಡುಗಡೆ ಮಾತನಾಡಿದ ಸಚಿವರು, ಮನರೇಗಾದಲ್ಲಿ 3,351 ಕೋಟಿಯಷ್ಟು ಹಗರಣ ನಡೆದಿದೆ. ಸುಳ್ಳು ದಾಖಲೆ ನೀಡಿ ಪ್ರತಿದಿನ ನೂರಾರು ಕೋಟಿ ಹಣ ಲೂಟಿ ಹೊಡೆದಿದ್ದಾರೆ. ಈ ಬಗ್ಗೆ ಸಿಎಜಿ ವರದಿಯಲ್ಲಿ ಅವ್ಯವಹಾರಗಳು ನಡೆದಿದೆ ಎಂದು ಉಲ್ಲೇಖಿಸಿದೆ. ಕಲಬುರಗಿ ಜಿಲ್ಲೆಯ ಗ್ರಾಮೀಣಾ ಇಲಾಖೆಯಲ್ಲಿ ಅಲಂಗ್ ಮತ್ತು ಜೇವರ್ಗ್ ಗ್ರಾಮದಲ್ಲಿ 21 ಕಾಮಗಾರಿ ನಡೆದಿದೆ. ಜೆಸಿಬಿ ಮೂಲಕ ಕಾಮಗಾರಿ ಮಾಡಿದ್ದಾರೆ.

ಮಳೆಕೋಯ್ಯು ವಿಚಾರದಲ್ಲಿ ಆಗಿರುವ ಕಾಮಗಾರಿಗೆ ಹಣ ಪಡೆದಿದ್ದಾರೆ. ಒಂದೇ ಕಾಮಗಾರಿಯನ್ನ ಹಂತ ಹಂತವಾಗಿ ವಿಭಜನೆ ಮಾಡುವುದಲ್ಲದೆ ಒಂದೇ ಕುಟುಂಬಕ್ಕೆ ಕಾಮಗಾರಿ ನೀಡಿದೆ. ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರ ಬಗ್ಗೆ ಎಂದಿಗೂ ಮಾತನಾಡುವುದಿಲ್ಲ ಎಂದು ಕಿಡಿಕಾರಿದರು.

ಯುಪಿಎ ಅವಧಿಯಲ್ಲಿ ಮನರೇಗಾದಡಿ 2.13 ಲಕ್ಷ ಕೋಟಿ ಕಾಮಗಾರಿ ನಡೆದರೆ ಎನ್‌ಡಿಎ ಅವಧಿಯಲ್ಲಿ 8,48 ಲಕ್ಷ ಕೋಟಿ ಕಾಮಗಾರಿ ನಡೆದಿದೆ. ಕರ್ನಾಟಕದಲ್ಲಿ 8,739 ಕೋಟಿ ಕಾಮಗಾರಿಗಳಿಗೆ ಖರ್ಚಾದರೆ ಎನ್‌ಡಿಎ ಅವಧಿಯಲ್ಲಿ 48,549 ಕೋಟಿಯಷ್ಟು ಕಾಮಗಾರಿ ನಡೆದಿದೆ. ಯುಪಿಎ ಅವಧಿಯಲ್ಲಿ ಸಾವಿರಾರು ಕೋಟಿ ಹಗರಣ ನಡೆದಿದೆ. ಮನರೇಗಾ ಅಂದ್ರೆ ಬರೀ ಮಣ್ಣು ಎತ್ತೋದಷ್ಟೇ ಕೆಲಸನಾ.? ಎಂದು ಪ್ರಶ್ನಿಸಿದರು.

ಪ್ರಸ್ತುತ ಕಾಮಗಾರಿ ದಿನವನ್ನ 125ಕ್ಕೆ ಹೆಚ್ಚಿಸಲಾಗಿದೆ. ಇದಕ್ಕಾಗಿ 1,51,282 ಕೋಟಿ ಈ ಯೋಜನೆಗೆ ಹಣ ಮೀಸಲೀರಿಸಲಾಗಿದೆ. 2,86 ಲಕ್ಷ ಗ್ರಾಮ ಪಂಚಾಯಿತಿಗಳಿದ್ದು, ಗ್ರಾಮಗಳಿವೆ. ಗ್ರಾಮ ಪಂಚಾಯಿತಿ ಅಧಿಕಾರ ಕಸಿದುಕೊಂಡಿಲ್ಲ. ಬದಲಾಗಿ ವಿಕಸಿತ ಭಾರತ್ ಯೋಜನೆ ಗ್ರಾಮ ಸಭೆಯೇ ತೀರ್ಮಾನಿಸಲಾಗಿದೆ. ನೀರಾವರಿ ಯೋಜನೆ ಸೇರಿದಂತೆ ಗ್ರಾಮಗಳಲ್ಲಿ ನಡೆಯುವ ಎಲ್ಲ ಕಾಮಗಾರಿ ನಡೆಸಬಹುದಾಗಿದೆ. ಮುಂಗಾರು ಅವಧಿಯಲ್ಲಿ 60 ದಿನಗಳ ಕಾಲ ಕಾರ್ಮಿಕರಿಗೆ ಕೆಲಸ ನೀಡುವ ವ್ಯವಸ್ಥೆಯಿದೆ. ರೈತರಿಗೆ ಕೆಲಸಗಾರರು ಅಗತ್ಯವಾಗಿ ಬೇಕಿದೆ. ನಾವು ಆ ಕೆಲಸಗಾರರನ್ನ ನೀಡುತ್ತೇವೆ. ಇದನ್ನ ಕಾಂಗ್ರೆಸ್ ಸಹಿಸಿಕೊಳ್ಳಲು ಆಗುತ್ತಿಲ್ಲ ಎಂದರು.

ನರೇಗಾ ಯೋಜನೆಯನ್ನ ಮೊದಲು ಜವಾಹರ್ ರೋಜ್ ಗಾರ್ ಯೋಜನೆ ಎಂದು ಕಾಂಗ್ರೆಸ್ ಹೆಸರಿಟ್ಟಿತ್ತು. ಜವಾಹರ್ ತೆಗೆದು ಮನರೇಗಾವನ್ನಾಗಿ ಬದಲಾವಣೆ ಮಾಡಿತ್ತು. ಇದೀಗ ನಾವು ವಿಕಸಿತ ಭಾರತ ರಾಮ್ ಜೀ ಹೆಸರಿಡುವ ಮೂಲಕ ಬದಲಾವಣೆ ಮಾಡಿದ್ದೇವೆ. ಕಾಂಗ್ರೆಸ್‌ನವರು ಮಾಡಿದರೆ ಪುಣ್ಯ. ನಾವು ಮಾಡಿದರೆ ಪಾಪನಾ ಎಂದು ಪ್ರಶ್ನಿಸಿದರು.

ಅಂಬಿಗರ ಚೌಡಯ್ಯನವರ ಜೀವನ ಮೌಲ್ಯಗಳನ್ನು ಅರಿಯೋಣ: ಸಚಿವ ಬೋಸರಾಜು ಸಲಹೆ

ರಾಯಚೂರು ಜ.21

ಸಮಾಜದಲ್ಲಿನ ಅನಾಚಾರ, ಅಪನಂಬಿಕೆಗಳನ್ನು ನಿರ್ಭೀತಿಯಿಂದ ಟೀಕಿಸಿ ಕ್ರಾಂತಿಕಾರಿ ಶರಣರು ಎಂದು ಹೆಸರಾದ ನಿಜಶರಣ ಅಂಬಿಗರ ಚೌಡಯ್ಯನವರ ಆಚಾರ-ವಿಚಾರಗಳನ್ನು ನಾವೆಲ್ಲರು ಅರಿತು ನಡೆಯಬೇಕು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಹೇಳಿದರು.



ಜನವರಿ 21ರ ಬುಧವಾರ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ನಿಜಶರಣ ಅಂಬಿಗರ ಚೌಡಯ್ಯ ಅವರು ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಅಂಬಿಗರ ಚೌಡಯ್ಯನವರು ತಮ್ಮ ವಚನ ಸಾಹಿತ್ಯದ ಮೂಲಕ ಸಮಾಜದಲ್ಲಿ ಸಮಾನತೆಯನ್ನು ಎತ್ತಿ ಹಿಡಿದರು. ಬಸವಣ್ಣನವರ ಅನುಯಾಯಿಗಳಾದ ಅಂಬಿಗರ ಚೌಡಯ್ಯನವರ ವಚನಗಳಲ್ಲಿ ಜೀವನದ ಸಾರವೇ ಅಡಗಿದೆ ಎಂದು ತಿಳಿಸಿದರು.

ಈ ವೇಳೆ ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಮಾತನಾಡಿ, ಅಂಬಿಗರ ಚೌಡಯ್ಯನವರು ವಚನಗಳ ಮೂಲಕ ಸಮಸಮಾಜ ಕಟ್ಟುವ ಕೆಲಸ ಮಾಡಿದರು ಎಂದು ತಿಳಿಸಿದರು. ಬಹುಸಂಖ್ಯಾತರಾದ ಗಂಗಾಮಸ್ಥರಿಗೆ ಸಮಾಜದಲ್ಲಿ ಸರಿಯಾದ ರೀತಿಯಲ್ಲಿ ಪ್ರಾತಿನಿಧ್ಯ ಸಿಗಬೇಕು. ಈ ನಿಟ್ಟನಲ್ಲಿ ಸಮಾಜದ ಕೆಲಸ ಕಾರ್ಯಗಳನ್ನು ಪಕ್ಷಾತೀತವಾಗಿ ಮಾಡಲಾಗುತ್ತದೆ. ಸಮಾಜದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದು ದೊಡ್ಡದೊಡ್ಡ ಹುದ್ದೆಗಳನ್ನು ಅಲಂಕರಿಸಬೇಕು ಎಂದರು.

ಗಂಗಾಮತಸ್ಥ ಸಮಾಜದ ಜಿಲ್ಲಾಧ್ಯಕ್ಷರಾದ ಕೆ.ಶಾಂತಪ್ಪ ಅವರು ವಿಶೇಷ ಉಪನ್ಯಾಸ ನೀಡಿ, ಚೌಡಯ್ಯನವರು ಯಾವುದೇ ಜಾತಿಗೆ ಸೀಮಿತವಲ್ಲ. ಅವರು ಮೂರ್ತಿ ಪೂಜೆಗೆ ಅವಕಾಶ ಕೊಡಲಿಲ್ಲ. ಅಂತಹ ನೇರ ನಿಷ್ಠುರ ಅಂಬಿಗರ ಚೌಡಯ್ಯನವರ ತಿಳಿಸಿದ ಸನ್ಮಾರ್ಗದಲ್ಲಿ ನಾವು ನಡೆಯಬೇಕು. ಚೌಡಯ್ಯನವರು ಬಸವನ ತತ್ವವನ್ನು ಒಪ್ಪಿ ಅನುಭವ ಮಂಟಪಕ್ಕೆ ಹೋದರು. ಮೂಢನಂಬಿಕೆಯಲ್ಲಿ ನಾವು ಮುಳುಗಿ ಹೋಗಿದ್ದೇವೆ. ಅಂತಹ ಮೂಢನಂಬಿಕೆಗಳಿದ ನಾವು ಹೊರ ಬರಬೇಕು. ನಮಗೆ ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠ ಇದ್ದು, ಆ ಗುರುಗಳ ಮಾರ್ಗದರ್ಶನದಲ್ಲಿ ನಾವೆಲ್ಲರೂ ನಡೆಯಬೇಕು. ನಮ್ಮ ಆಚಾರ ವಿಚಾರ, ಸಂಸ್ಕೃತಿಯನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯವಾಗಬೇಕು. ವಿದ್ಯಾರ್ಥಿಗಳಲ್ಲಿ ಸಂಸ್ಕಾರವನ್ನು ಕಲಿಸಬೇಕು. ಸಮಾಜದ ಬಗ್ಗೆ ತಿಳಿಹೇಳಬೇಕು ಎಂದರು.

ಸಮಾಜದ ವಿವಿಧ ಸಾಧಕರಿಗೆ ಸನ್ಮಾನ: ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಮಾಜದ ಸಾಧಕರಿಗೆ ಗಣ್ಯರಿಂದ ಸನ್ಮಾನಿಸಿ ಗೌರವಿಸಲಾಯಿತು.

ಮೂರನೇಯ ಪುಟಕ್ಕೆ

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪತ್ರಕರ್ತರ ಸಭೆ
ಪತ್ರಕರ್ತರ ಒತ್ತಾಸೆಯಿಂದಲೇ ರಾಯಚೂರು ಉತ್ಸವ-2026 ಸಾಧ್ಯ



ರಾಯಚೂರು,ಜ.21-

ರಾಯಚೂರು ಜಿಲ್ಲೆಯಲ್ಲಿ ರಾಯಚೂರು ಉತ್ಸವ-2026' ಆಯೋಜನೆ ಸಾಧ್ಯವಾಗಲು ಜಿಲ್ಲೆಯ ಎಲ್ಲಾ ಮಾಧ್ಯಮ ಪ್ರತಿನಿಧಿಗಳು ನಿರಂತರವಾಗಿ ವ್ಯಕ್ತಪಡಿಸಿದ ಒತ್ತಾಸೆಯೂ ಪ್ರಮುಖ ಕಾರಣವಾಗಿದೆ ಎಂದು ಜಿಲ್ಲಾಧಿಕಾರಿ ನಿತೀಶ್ ಕೆ ಅವರು ಹೇಳಿದರು.

ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಪತ್ರಕರ್ತರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳ ಇಚ್ಛಾಶಕ್ತಿ ಹಾಗೂ ಪತ್ರಕರ್ತರ ಸಕ್ರಿಯ ಪ್ರಯತ್ನದಿಂದಾಗಿ ಪ್ರಸಕ್ತ ವರ್ಷ ಉತ್ಸವಕ್ಕೆ ವಿವಿಧ ಮೂಲಗಳಿಂದ ಹಣಕಾಸಿನ ಸಹಕಾರ ಲಭಿಸುತ್ತಿದೆ. ಇದರಿಂದ ಉತ್ಸವವನ್ನು ಯಶಸ್ವಿಯಾಗಿ ನಡೆಸುವ ಸದಾಶಯ ಎಲ್ಲ ವಲಯಗಳಿಂದ ವ್ಯಕ್ತವಾಗುತ್ತಿದೆ ಎಂದು ತಿಳಿಸಿದರು.

ಕಡಿಮೆ ಬಜೆಟ್ಟನಲ್ಲಿಯೇ ವಿಭಿನ್ನ ಹಾಗೂ ಜನಾಕರ್ಷಕ ಕಾರ್ಯಕ್ರಮಗಳನ್ನು ಒಳಗೊಂಡಂತೆ ಉತ್ಸವವನ್ನು ಆಯೋಜಿಸ

ಮೂರನೇಯ ಪುಟಕ್ಕೆ

ಶಾಸಕರಿಗೆ ಜೀವ ಬೆದರಿಕೆ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ-ಗಂಭೀರ ಆರೋಪ

ರಾಯಚೂರು, ಜ. 22-

ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದ್ದು, ಹಾಲಿ ಶಾಸಕರ ಮೇಲೆಯೇ ಜೀವ ಬೆದರಿಕೆ ಹಾಕುವ ಮಟ್ಟಿಗೆ ಪರಿಸ್ಥಿತಿ ತಲುಪಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷರಾದ ಎಂ. ವಿರೂಪಾಕ್ಷಿ ಗಂಭೀರ ಆರೋಪ ಮಾಡಿದರು.



ಗುರುವಾರ ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವದುರ್ಗ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ. ಕರೆಮ್ಮ ನಾಯಕ ಅವರಿಗೆ ಶ್ರೀನಿವಾಸ್ ನಾಯಕ್ ಹಾಗೂ ಅವರ ಸಹಚರರು ಜೀವ ಬೆದರಿಕೆ ಹಾಕಿರುವ ಕುರಿತು ದೂರು ದಾಖಲಾಗಿದ್ದರೂ, ಅವರ ವಿರುದ್ಧ ಪೊಲೀಸ್ ಇಲಾಖೆ ಯಾವುದೇ ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು. ದೂರು ದಾಖಲಾಗಿರುವ ವ್ಯಕ್ತಿಯೇ ನಿನ್ನೆ ಐಬಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿರುವುದು ಪೊಲೀಸ್ ವ್ಯವಸ್ಥೆಯ ವೈಫಲ್ಯಕ್ಕೆ ಸಾಕ್ಷಿಯಾಗಿದೆ ಎಂದು ಪ್ರಶ್ನಿಸಿದರು.

ಈ ಬಗ್ಗೆ ಐಜಿಪಿ ಬಳ್ಳಾರಿ ಅವರ ಗಮನಕ್ಕೆ ತರಲಾಗುವುದು, ಜಿಲ್ಲೆಯಲ್ಲಿ ಅಕ್ರಮ ಮರಳು ದಂಧೆ, ಮಟ್ಕಾ ಹಾಗೂ ಇಸ್ಪೀಟ್ ಜೂಜು ಅಬ್ಬರದಿಂದ ನಡೆಯುತ್ತಿದ್ದರೂ ಪೊಲೀಸ್ ಇಲಾಖೆ ಕಣ್ಮುಚ್ಚಿ ಕುಳಿತಿದೆ. ಇದಕ್ಕೆ ಕಾರಣ, ಈ ಅಕ್ರಮ ಚಟುವಟಿಕೆಗಳಲ್ಲಿ ಪೊಲೀಸರೇ ನೇರವಾಗಿ ಭಾಗಿಯಾಗಿದ್ದು, ಹಪ್ತಾ ವಸೂಲಿ ಮಾಡುತ್ತಿದ್ದಾರೆ ಎಂಬ ಗಂಭೀರ ಆರೋಪವನ್ನು ಎಂ.ವಿರೂಪಾಕ್ಷಿ ಮುಂದಿಟ್ಟರು. ತಿಂಗಳಿಗೆ ಲಕ್ಷಾಂತರ ರೂಪಾಯಿ ವಸೂಲಿ ಮಾಡಿ ಅದನ್ನು ಮೇಲಾಧಿಕಾರಿಗಳಿಗೆ ನೀಡಲಾಗುತ್ತಿದೆ ಎಂದು ಸಿಬ್ಬಂದಿಗಳೇ ಹೇಳಿಕೊಳ್ಳುತ್ತಿರುವ ಸ್ಥಿತಿಯಲ್ಲಿ ಅಕ್ರಮ ದಂಧೆಗಳನ್ನು ತಡೆಗಟ್ಟಲು ಸಾಧ್ಯವೇ ಎಂದು ಅವರು ಪ್ರಶ್ನಿಸಿದರು.

ಜಿಲ್ಲಾಡಳಿತ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಕ್ರಮ ಮರಳು ದಂಧೆಯ ವಿರುದ್ಧ ಕ್ರಮ ಕೈಗೊಳ್ಳದೆ ಸಂಬಂಧವಿಲ್ಲದಂತೆ ವರ್ತಿಸುತ್ತಿವೆ. ಶಾಸಕರ ಸಂಬಂಧಿಯಾದ ಹನುಮಂತ್ ರಾಯ ಅವರು ದೂರು ನೀಡಿದರೂ ಶ್ರೀನಿವಾಸ್ ನಾಯಕ್ ಹಾಗೂ ಅವರ ಸಹಚರರ ವಿರುದ್ಧ ಯಾವುದೇ ಕ್ರಮ ಜರುಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಶಾಸಕರೇ ಸ್ವತಃ ಎಸ್‌ಪಿ ಅವರನ್ನು ಭೇಟಿ ಮಾಡಲು ಬಂದಾಗ, ''ಹೊರ ಹೋಗಬೇಡಿ, ನಿಮ್ಮನ್ನು ಕೊಲ್ಲುವ ಸಂಚು ನಡೆಯುತ್ತಿದೆ'' ಎಂದು ಹೇಳುವ ಮಟ್ಟಿಗೆ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅವರು ತಿಳಿಸಿದರು.

ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತಕ್ಷಣವೇ ಶ್ರೀನಿವಾಸ್ ನಾಯಕ ಅವರ ಸಹಚರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಫೆಬ್ರವರಿ 5ರಿಂದ ನಡೆಯಲಿರುವ ರಾಯಚೂರು ಉತ್ಸವದ ಪ್ರತಿಯೊಂದು ಕಾರ್ಯಕ್ರಮದಲ್ಲೂ ಜೆಡಿಎಸ್ ವತಿಯಿಂದ ಕಪ್ಪು

ಮೂರನೇಯ ಪುಟಕ್ಕೆ

ಜಿಲ್ಲೆಯಲ್ಲಿ ಅಕ್ರಮ ಮರಳು ಗಣಿಗಾರಿಕೆಗೆ ತಡೆಗೆ ಇಲಾಖೆ ಸಕ್ರಿಯ : ಐಜಿಪಿ ಹರ್ಷಾ ಎಚ್ಚರಿಕೆ

ರಾಯಚೂರು,ಜ.22-

ಜಿಲ್ಲೆಯಲ್ಲಿ ಅಕ್ರಮ ಮರಳು ತಡೆಗಟ್ಟಲು ಎಸ್ ಪಿ ನೇತೃತ್ವದಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ಸಕ್ರೀಯವಾಗಿ ಕೆಲಸ ಮಾಡುತ್ತಿದ್ದಾರೆ. ಅಕ್ರಮದಲ್ಲಿ ಪೊಲೀಸ್ ಇಲಾಖೆಯ ಸಿಬ್ಬಂದಿಗಳೂ ಪರೋಕ್ಷವಾಗಿ ಭಾಗಿಯಾಗಿದ್ದಲ್ಲಿ ಶಿಸ್ತು ಕ್ರಮ ಕೈಗೊಳ್ಳಲು ನಿರ್ದೇಶನ ನೀಡಲಾಗಿದೆ. ಅಕ್ರಮ ಚಟುವಟಿಕೆಗಳಲ್ಲಿ ಯಾರೇ ಭಾಗಿಯಾದರೂ ಕಾನೂನು ವ್ಯಾಪ್ತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಬಳ್ಳಾರಿ ವಲಯದ ಪೊಲೀಸ್ ಮಹಾನಿರ್ದೇಶಕ (ಐಜಿಪಿ) ಡಾ.ಪಿ.ಎಸ್ ಹರ್ಷಾ ಅವರು ತಿಳಿಸಿದರು.



ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವದುರ್ಗ ಸೇರಿದಂತೆ ಜಿಲ್ಲೆಯಲ್ಲಿ ಅಕ್ರಮ ಮರಳು ಗಣಿಗಾರಿಕೆ, ಕಾನೂನು ಬಾಹೀರವಾಗಿ ಸಾಗಣೆಗೆ ತಡೆಯಲು ವಿವಿಧ ಇಲಾಖೆಗಳ ಜೊತೆಗೂಡಿ ಕೆಲಸ ಮಾಡುತ್ತಿದೆ. ಅಕ್ರಮದಲ್ಲಿ ಪ್ರಭಾವಿಗಳು, ಪೊಲೀಸ್ ಸಿಬ್ಬಂದಿ, ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂಬ ಆರೋಪಗಳು, ಪತ್ರಿಕಾ ವರದಿಗಳಿಂದ ಮಾಹಿತಿ ಬಂದಿದ್ದು, ಪೊಲೀಸ್ ಸೇರಿ ಯಾವುದೇ ಇಲಾಖೆಯ ಅಧಿಕಾರಿಗಳು ಶಾಮೀಲಾಗಿದ್ದರೆ ನಿಖರವಾಗಿ ಮಾಹಿತಿ ಪಡೆದು ಕ್ರಮ ತೆಗೆದುಕೊಳ್ಳುತ್ತೇವೆ, ಅಕ್ರಮ

ಮೂರನೇಯ ಪುಟಕ್ಕೆ

ಜನಪ್ರತಿನಿಧಿಗಳ ಆಡಳಿತವನ್ನೇ ಮುಂದುವರಿಸಲು ಆಗ್ರಹ

ರಾಯಚೂರು, ಜ.22-

ಪ್ರಜಾಪ್ರಭುತ್ವ ವಿರೋಧಿ ಆದೇಶವನ್ನು ತಕ್ಷಣವೇ ಹಿಂಪಡೆದು, ಕಾನೂನಿನ ಅನ್ವಯ ಅವಧಿ ಮುಗಿಯುತ್ತಿರುವ ಗ್ರಾಮ ಪಂಚಾಯತಿಗಳ ಈಗಿನ ಆಡಳಿತ ಸಮಿತಿಯನ್ನೇ ಪುನರ್ ನೇಮಕ ಮಾಡುವ ಮೂಲಕ ಜನಪ್ರತಿನಿಧಿಗಳ ಆಡಳಿತವನ್ನು ಮುಂದುವರಿಸಬೇಕೆಂದು ಎಂದು ರಾಯಚೂರು ಜಿಲ್ಲಾ ಗ್ರಾಮ ಪಂಚಾಯತಿ ಸದ್ಯಸರ ಒಕ್ಕೂಟದ ಜಿಲ್ಲಾಧ್ಯಕ್ಷ ಶ್ರೀಧರ್ ಗೌಡ ಆಗ್ರಹಿಸಿದರು.



ಅವರು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ,ಗ್ರಾಮ ಪಂಚಾಯಿತಿಗಳು ಪ್ರಜಾಪ್ರಭುತ್ವದ ತಳಹದಿಯಾಗಿದ್ದು, ಅವುಗಳಲ್ಲಿ ಜನಪ್ರತಿನಿಧಿಗಳ ಮೂಲಕವೇ ಆಡಳಿತ ನಡೆಯಬೇಕು. ಆದರೆ ಅವಧಿ ಮುಗಿಯುತ್ತಿರುವ ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸುವ ರಾಜ್ಯ ಸರ್ಕಾರದ ಕ್ರಮವು ಪ್ರಜಾಪ್ರಭುತ್ವದ ಆತ್ಮಕ್ಕೆ ವಿರುದ್ಧವಾಗಿದೆ.

ದಿ.16 ರಂದು ರಾಜ್ಯ ಸರ್ಕಾರ ಹೊರಡಿಸಿದ ಆದೇಶದಂತೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ1993 ರ ಸೆಕ್ಷನ್ 8(1)(ಬಿ)() ಅನ್ವಯ ಗ್ರಾಮ ಪಂಚಾಯತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಆದರೆ ಇದೇ ಅಧಿನಿಯಮದ ಸೆಕ್ಷನ್ 8(1)(ಬಿ)(9) ರನ್ವಯ, ಚುನಾಯಿತ ಪ್ರತಿನಿಧಿಗಳನ್ನೊಳಗೊಂಡ ಆಡಳಿತ ಸಮಿತಿಯನ್ನು ನೇಮಿಸಲು ಸ್ಪಷ್ಟವಾದ ಕಾನೂನು ಅವಕಾಶವಿರುವುದನ್ನು ಸರ್ಕಾರ ನಿರ್ಲಕ್ಷಿಸಿದೆ ಎಂದರು. ಜನರಿಂದ ಆಯ್ಕೆಯಾದ ಪ್ರತಿನಿಧಿಗಳನ್ನು ಬದಿಗೊತ್ತಿ ಅಧಿಕಾರಿಗಳ ಮೂಲಕ ಆಡಳಿತ ನಡೆಸುವುದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಕ್ರಮವಾಗಿದ್ದು, ಇದು ಜನತಂತ್ರದ ಮೂಲ ತತ್ವಗಳಿಗೆ ಧಕ್ಕೆ ತರುವುದಾಗಿದೆ.

ಈ ಹಿಂದೆ 2020ರಲ್ಲಿ ಕೋವಿಡ್ ಮಹಾಮಾರಿಯಿಂದಾಗಿ ಗ್ರಾಮ ಪಂಚಾಯತಿ ಚುನಾವಣೆ ನಡೆಸಲು ಸಾಧ್ಯವಾಗದ ಸಂದರ್ಭದಲ್ಲಿ, ಅಂದಿನ ವಿರೋಧ ಪಕ್ಷದ ನಾಯಕರಾಗಿದ್ದ ಇಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇಂದಿನ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜಂಟಿ ಪತ್ರಿಕಾ ಗೋಷ್ಠಿಯಲ್ಲಿ ಗ್ರಾಮ ಪಂಚಾಯತಿಗಳು ಪ್ರಜಾಪ್ರಭುತ್ವದ ತಳಪಾಯವಾಗಿರುವುದರಿಂದ ಆಡಳಿತಾಧಿಕಾರಿಗಳನ್ನು ನೇಮಿಸದೇ, ಆಡಳಿತ

ಮೂರನೇಯ ಪುಟಕ್ಕೆ

ಭೂ ಒಡೆತನ ಯೋಜನೆ ಜಾರಿಯಲ್ಲಿ ನಿರ್ಲಕ್ಷ್ಯ:ಖಂಡನೆ

ರಾಯಚೂರು, ಜ.22-ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ತಾಂಡ ಅಭಿವೃದ್ಧಿ ನಿಗಮ ಹಾಗೂ ಅಲೆಮಾರಿ ಅಭಿವೃದ್ಧಿ ನಿಗಮಗಳ ಅಡಿಯಲ್ಲಿ ಜಾರಿಯಾಗಬೇಕಾದ ಭೂ ಒಡೆತನ ಯೋಜನೆ ಕಳೆದ 7 ವರ್ಷಗಳಿಂದ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು.ಜಿಲ್ಲಾಡಳಿತದ ನಿರ್ಲಕ್ಷ್ಯತನವನ್ನು ಎಮ್. ಆರ್. ಎಚ್. ಎಸ್ ಜಿಲ್ಲಾಧ್ಯಕ್ಷ ಹನುಮಂತಪ್ಪ ಮನ್ನಾಪುರಿ ಖಂಡಿಸಿದರು.



ಅವರು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ,ಜಿಲ್ಲೆಯ ಭೂ ರಹಿತ ಫಲಾನುಭವಿಗಳು ಹಲವು ವರ್ಷಗಳ ಹಿಂದೆಯೇ ನಿಗಮಗಳಿಗೆ ಅರ್ಜಿ ಸಲ್ಲಿಸಿದ್ದರೂ ಸಹ ಇದುವರೆಗೆ ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕರು ಭೂ ಒಡೆತನ ಯೋಜನೆಗೆ ಸಂಬಂಧಿಸಿದಂತೆ ಸಭೆ ನಡೆಸದೇ ನಿರ್ಲಕ್ಷ್ಯ ತೋರಿದ್ದಾರೆ. ಈ ಬಗ್ಗೆ ದಲಿತಪರ ಸಂಘಟನೆಗಳ ವತಿಯಿಂದ ಹಲವಾರು ಬಾರಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರೂ ಯಾವುದೇ ಸ್ಪಂದನೆ ದೊರಕಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸದರು.

ದಿನಾಂಕ 04-10-2023 ರಂದು ಬೆಂಗಳೂರಿನಲ್ಲಿ ನಡೆದ ಮುಖ್ಯಮಂತ್ರಿಗಳ ಜನತಾ ದರ್ಶನ ಕಾರ್ಯಕ್ರಮದಲ್ಲಿ ದೇವದುರ್ಗದಿಂದ ಆಗಮಿಸಿದ ಫಲಾನುಭವಿಗಳು ತಮ್ಮ ಸಮಸ್ಯೆಯನ್ನು ನೇರವಾಗಿ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದರು. ಸುಮಾರು 67 ವರ್ಷಗಳಿಂದ ಇಲಾಖೆಗಳಿಗೆ ಸುತ್ತಾಡಿ ನೊಂದು ಹೋಗಿದ್ದೇವೆ ಎಂದು ಫಲಾನುಭವಿಗಳು ಅಳಲು ತೋಡಿಕೊಂಡಾಗ, ಮುಖ್ಯಮಂತ್ರಿಗಳು ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಅಂಬೇಡ್ಕರ್ ನಿಗಮದ ನಿರ್ದೇಶಕರಿಗೆ ಸೂಚನೆ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಕಂದಾಯ ಇಲಾಖೆ), ಬೆಂಗಳೂರು ಅವರು ದಿನಾಂಕ 27-11-2023 ರಂದು ಭೂ ಒಡೆತನ ಯೋಜನೆಗೆ ಸಂಬಂಧಿಸಿದಂತೆ ಕಮೀಟಿ ರಚಿಸಿ ಫಲಾನುಭವಿಗಳಿಗೆ ಭೂಮಿ ಮಂಜೂರು ಮಾಡಬೇಕೆಂದು ರಾಯಚೂರು ಜಿಲ್ಲಾಧಿಕಾರಿಗಳಿಗೆ ಲಿಖಿತ ಪತ್ರದ ಮೂಲಕ ನಿರ್ದೇಶನ ನೀಡಿದ್ದರು. ಆದರೂ ಇಲ್ಲಿಯವರೆಗೆ ಕಮೀಟಿ ರಚನೆ ಆಗದೇ ಇರುವುದು ಜಿಲ್ಲಾಡಳಿತದ ಬೇಜವಾಬ್ದಾರಿತನಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ ಎಂದು ಆರೋಪಿಸಿದರು.

ಇದಲ್ಲದೆ ಸಮಾಜ ಕಲ್ಯಾಣ ಸಚಿವರಾದ ಡಾ. ಎಚ್.ಸಿ. ಮಹಾದೇವಪ್ಪ

ಮೂರನೇಯ ಪುಟಕ್ಕೆ

ಶ್ರೀ ಅಂಬಿಗರ ಚೌಡಯ್ಯರಿಂದ ನಿಷ್ಠುರವಾದಿಯಾಗಿ ವಚನಗಳ ಮೂಲಕ ಸಮಾಜ ತಿದ್ದುವ ಕಾರ್ಯ



ಯಾದಗಿರಿ,ಜ.22-

ಶರಣರಲ್ಲಿ ವಿಭಿನ್ನ ವ್ಯಕ್ತಿತ್ವ ಹೊಂದಿದ್ದ ನಿಜಶರಣ ಶ್ರೀ ಅಂಬಿಗರ ಚೌಡಯ್ಯನವರು ಶ್ರೇಷ್ಠ ತತ್ವಜ್ಞಾನಿ ಯಾಗಿ, ನಿಷ್ಠುರವಾದಿಯಾಗಿ ಸಮಾ ಜ ತಿದ್ದುವ ಕಾರ್ಯ ಮಾಡಿದ್ದಾರೆ ಎಂದು ಶಾಸಕ ಶ್ರೀ ಚನ್ನಾರೆಡ್ಡಿ ಪಾಟೀ ಲ್ ತುನ್ನೂರ ಅವರು ಹೇಳಿದರು.

ನಗರದ ವಿದ್ಯಾಮಂಗಲ್ ಕಾರ್ಯಾಲಯದಲ್ಲಿ ಇಂದು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಹಾಗೂ ನಿಜಶರಣ ಶ್ರೀ ಅಂಬಿಗರ ಚೌಡಯ್ಯ ಜಯಂತ್ಯೋತ್ಸವ ಸಮಿತಿ, ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ

ನಿಜಶರಣ ಶ್ರೀ ಅಂಬಿಗರ ಚೌಡಯ್ಯ ಜಯಂತಿ ಕಾರ್ಯ ಕ್ರಮವನ್ನು ಉದ್ಘಾಟಿಸಿ, ಶ್ರೀ ಅಂಬಿಗರ ಚೌಡಯ್ಯ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಗೌರವ ಅರ್ಪಿಸಿ ಅವರು ಮಾತನಾಡಿದರು.

ಹನ್ನೆರಡನೇ ಶತಮಾನದ ಅನುಭವ ಮಂಟಪವು ಇಂದಿನ ಭಾರತದ ಸಂವಿಧಾನ ಹಾಗೂ ಪ್ರಜಾ ಪ್ರಭುತ್ವ ವ್ಯವಸ್ಥೆಗೆ ಬುನಾದಿ ಯಾಗಿದೆ. ನಿಜಶರಣ ಅಂಬಿಗರ ಚೌಡಯ್ಯ ಹಾಗೂ ಇತರೆ ಶರಣರು ವಚನಗಳ ಮೂಲಕ ಅಂದಿನ ಸಾಮಾಜಿಕ ಅನಿಷ್ಟ ಪದ್ದತಿಗಳನ್ನು ತೊಡೆದುಹಾಕಲು ಶ್ರಮಿಸಿದರು ಎಂದು ಹೇಳಿದರು.

ಇಂತಹ ಶರಣರ ತತ್ವ ಆದರ್ಶಗಳನ್ನು ಇಂದಿನ ಮಕ್ಕಳು ತಮ್ಮ ನಿಜಜೀವನದಲ್ಲಿ ಪರಿಪಾಲಿಸಬೇಕು. ಉತ್ತಮ ಶಿಕ್ಷಣದ ಮೂಲಕ ಜೀವನದಲ್ಲಿ ಮುಂಚೂಣಿಗೆ ಬರುವಂತೆ ಅವರು ಸಲಹೆ ನೀಡಿದರು.

ರಾಜ್ಯ ಸರ್ಕಾರವು ಎಲ್ಲ ಸಮಾಜದವರಿಗೆ ಹಲವು ರೀತಿಯ ಸವಲತ್ತುಗಳನ್ನು ನೀಡುತ್ತಿದೆ. ಕೋಲಿ, ಕಬ್ಬಲಿಗ ಸಮಾಜಕ್ಕೆ ಶಕ್ತಿ ತುಂಬುವ, ಆರ್ಥಿಕವಾಗಿ ಬಲ ತುಂಬುವ ಕಾರ್ಯ ಮಾಡುತ್ತಿದ್ದು, ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ನೀವೃತ್ತ ಉಪನ್ಯಾಸಕರಾದ ಆರ್.ಎಲ್.ಸುಣಗಾರ ಅವರು ಸಮತಾವಾದಿ ಜಗಜ್ಯೋತಿ ಶ್ರೀ ಬಸವೇಶ್ವರರವರು ಕಲ್ಯಾಣ ಕ್ರಾಂತಿಗೆ ಕಾರಣಕರ್ತರು. ಇಂತಹ ಮತ್ತು ಇತರ ಶರಣರು ಕಾಯಕದ ಜೊತೆಗೆ ಜೀವನಾನುಭವವನ್ನು ತಮ್ಮ ವಚನಗಳ ಬೋಧನೆ ಮೂಲಕ

ಸಮಾಜ ತಿದ್ದುವ ಕಾರ್ಯ ಮಾಡಿದರು. ವಿಶೇಷವಾಗಿ ನಿಜಶರಣ ಶ್ರೀ ಅಂಬಿಗರ ಚೌಡಯ್ಯನವರು ವಿಭಿನ್ನ ಹಾಗೂ ವಿಶೇಷ ಶರಣರಾಗಿ , ಸ್ವಾಭಿಮಾನಿ, ನೇರವಾಗಿ ಹೇಳುವ ಶರಣರಾಗಿದ್ದರು, ಸುಮಾರು 279 ಕ್ಕೂ ಹೆಚ್ಚು ವಚನಗಳ ಮೂಲಕ ಸಮಾಜ ತಿದ್ದುವ ಕಾರ್ಯ ಮಾಡಿದ್ದಾರೆ.ಅಂತಹ ಮಹಾನ್ ಶರಣರ ಮಾರ್ಗದಲ್ಲಿ ನಮ್ಮ ಸಮುದಾಯ ನಡೆಯಬೇಕೆಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಎಸ್‌ಎಸ್ ಎಲ್ ಸಿ ಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಹಾಗೂ ಸಾಧನೆಗೈದವರನ್ನು ಸನ್ಮಾನಿಸಲಾಯಿತು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್, ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ವಿಜಯ ಕುಮಾರ್ ಮಡ್ಡೆ, ಮಾಜಿ ನಗರಸಭೆ ಅಧ್ಯಕ್ಷ ಲಲಿತಾ ಅನಪುರ, ಸಮಾಜದ ಮುಖಂಡರಾದ ಆಶಪ್ಪ ಗಾಜರ ಕೋಟ, ನಾಗರತ್ನ ಅನಪುರ, ಬವ ರಾಜ ಬಾಗಲಿ, ನಿಜಶರಣ ಅಂಬಿಗರ ಚೌಡಯ್ಯ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಗೋಸಿ, ಉಪಸ್ಥಿತರಿದ್ದರು.ಶ್ರೀ ವೆಂಕಟೇಶ್ ಸ್ವಾಗತಿಸಿದರು.

ಬಾಡಿಗೆ ಪಾವತಿಸದ ಮಳಿಗೆಗಳಿಗೆ ನಗರಸಭೆಯಿಂದ ಬೀಗ



ಗಂಗಾವತಿ,ಜ.22-

ಹಲವಾರು ವರ್ಷಗಳಿಂದ ಮಳಿಗೆಗಳ ಬಾಡಿಗೆ ನಗರಸಭೆಗೆ ಪಾವತಿಸದ ಕಾರಣ ನಗರಸಭೆಯ ಸಿಬ್ಬಂದಿಗಳು ಬೀಗ ಜಡಿದಿದ್ದಾರೆ. ಕಳೆದ 20 ವರ್ಷಗಳಿಂದ ನಗರ ಸಭೆಯ ಮಳಿಗೆಗಳಲ್ಲಿ ಬಾಡಿದೆ ಇದ್ದು, ಸರಿಯಾದ ರೀತಿಯಲ್ಲಿ ತಿಂಗಳ ಬಾಡಿಗೆ ಕಟ್ಟದೆ ಇರುವದರಿಂದ ಬೀಗ ಹಾಕಿದ್ದಾರೆ. ಹಳೇ ತಹಸೀಲ ಕಚೇರಿ ಮುಂದೆ ನಗರ ಸಭೆಯ ಮಳಿಗೆಗಳಿದ್ದು, ಹಲವಾರು ಬಾರಿ ಬಾಡಿಗೆ ಪಾವತಿಸ ಬೇಕೆಂದು ಪೌರಾಯುಕ್ತರು ಸೂಚನೆ ನೀಡಿದ್ದರು ಸಹ ಬಾಡಿಗೆ ಇರುವವರು ಬಾಡಿಗೆ ಕಟ್ಟದೆ ಸತಾಯಿಸುತ್ತಿದ್ದರು. ಈ ಕುರಿತು ಜಿಲ್ಲಾಧಿಕಾರಿಗಳ ಸಭೆಯಲ್ಲಿ ಕೂಡಲೆ ಪಾವತಿ ಮಾಡದ ಮಳಿಗೆಗಳಿಗೆ ಬೀಗ ಹಾಕಿ ನಗರಸಭೆಯವರು ಸುಪರ್ಧಿಗೆ ತೆಗೆದುಕೊಳ್ಳ ಬೇಕೆಂದು ಆದೇಶದ ಹಿನ್ನಲೆಯಲ್ಲಿ 5 ಕ್ಕು ಹೆಚ್ಚು ಮಳಿಗೆಗಳಿಗೆ ಬೀಗ ಜಡಿದಿದ್ದಾರೆ. ಈ ವೇಳೆ ಪೌರಾಯುಕ್ತ ವಿರೂಪಾಕ್ಷ ಮೂರ್ತಿ, ಸಿಬ್ಬಂದಿಗಳಾದ ಬಸವ ರಾಜ್ ಮಹೆಬೂಬು ಪಾಷಾ ಸೇರಿದಂತೆ ಸಿಬ್ಬಂದಿಗಳು ಇದ್ದರು.

ಹಂಪಿ ಉತ್ಸವದ ಯಶಸ್ಸಿಗೆ ಅಧಿಕಾರಿಗಳು ಜವಾಬ್ದಾರಿಯಿಂದ ಶ್ರಮಿಸಿ: ಡಿಸಿ ಕಡಕ್ ಸೂಚನೆ



ವಿಜಯನಗರ ,ಜ.22-

ವಿಶ್ವವಿಖ್ಯಾತ ಹಂಪಿ ಉತ್ಸವವನ್ನು ಅತ್ಯಂತ ವೈಭವದಿಂದ ಮತ್ತು ಯಶಸ್ವಿಯಾಗಿ ಆಯೋಜಿಸಲು ಅಧಿಕಾರಿಗಳು ತಮಗೆ ವಹಿಸಿದ ಜವಾ ಬ್ದಾರಿಗಳನ್ನು ಯಾವುದೇ ಲೋಪ ದೋಷವಿಲ್ಲದೆ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಂಗಳವಾರ ನಡೆದ ಹಂಪಿ ಉತ್ಸವದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಈ ಬಾರಿ ಫೆಬ್ರವರಿ 13 ರಿಂದ 15ರವರೆಗೆ ಮೂರು ದಿನಗಳ ಕಾಲ ಉತ್ಸವ ನಡೆಯಲಿದ್ದು, ಸಿದ್ಧತೆಗಳಿಗಾಗಿ ಈಗಾಗಲೇ 21 ಉಪ ಸಮಿತಿಗಳನ್ನು ರಚಿಸಲಾಗಿದೆ ಎಂದು ಅವರು ತಿಳಿಸಿದರು.

ತಾರಾ ಮೆರುಗು ಮತ್ತು ಐದು ವೇದಿಕೆಗಳು: ಈ ಬಾರಿಯ ಉತ್ಸವದಲ್ಲಿ ಒಟ್ಟು ಐದು ವೇದಿಕೆಗಳನ್ನು ನಿರ್ಮಿ ಸಲಾಗುತ್ತಿದ್ದು, ಚಂದನ ವನದ ಖ್ಯಾತ ಕಲಾವಿದರಾದ ಡಾಲಿ ಧನಂಜ ಯ್, ಧ್ರುವ ಸರ್ಜಾ, ರಚಿತಾ ರಾಮ್, ರುಕ್ಮಿಣಿ ವಸಂತ್, ಉಪೇ ಂದ್ರ, ಹಾಗೂ ಗಾಯಕರಾದ ಸಂಜಿತ್ ಹೆಗ್ಡೆ, ಶ್ರೇಯಾ ಘೋಷಾಲ್ ಸೇರಿ ದಂತೆ ಹಲವು ಕಲಾವಿದರು ಪಾಲ್ಗೊ ಳ್ಳಲಿದ್ದಾರೆ. ಇವರೆಲ್ಲರಿಗೂ ಸೂಕ್ತ ವಸತಿ ಮತ್ತು ಶಿಷ್ಟಾಚಾರದಂತೆ ಆತಿಥ್ಯ ನೀಡಲು ಅಧಿಕಾರಿಗಳಿಗೆ ಸೂಚಿಸ ಲಾಗಿದೆ.

ಸುಗಮ ಸಂಚಾರಕ್ಕೆ ಆದ್ಯತೆ, ಹೆಚ್ಚುವರಿ ಬಸ್ ಸೌಲಭ್ಯ: ನೆರೆ ಜಿಲ್ಲೆಗಳಿಂದ ಬರುವ ಪ್ರವಾಸಿಗರಿಗಾಗಿ ಕೆಎಸ್‌ಆರ್‌ಟಿಸಿ ವತಿಯಿಂದ ಹೆಚ್ಚಿನ ಬಸ್ ವ್ಯವಸ್ಥೆ ಮಾಡಲಾಗುವುದು. ರಸ್ತೆ ದುರಸ್ತಿ: ಹಂಪಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿನ 'ಬ್ಲಾಕ್‌ಸ್ಪಾಟ್'ಗಳನ್ನು ಗುರುತಿಸಿ ಕೂಡಲೇ ದುರಸ್ತಿಪಡಿಸಲು ಮತ್ತು ರಸ್ತೆ ಬದಿಯ ಜಂಗಲ್ ತೆರವುಗೊಳಿಸಲು ಸಂಬಂ ಧಪಟ್ಟ ಇಲಾಖೆಗೆ ನಿರ್ದೇಶನ ನೀಡಿ ದರು. ಹಿರಿಯ ನಾಗರಿಕರಿಗೆ ಸೌಲಭ್ಯ: ಹಿರಿಯ ನಾಗರಿಕರಿಗಾಗಿ ವಿಶೇಷವಾಗಿ 'ಪಿಕಪ್ ಮತ್ತು ಡ್ರಾಪ್' ವ್ಯವಸ್ಥೆಯನ್ನು ಪ್ರಾದೇಶಿಕ ಸಾರಿಗೆ ಇಲಾಖೆ ವ್ಯವಸ್ಥೆ ಕಲ್ಪಿಸಬೇಕು. ಮೂಲಭೂತ ಸೌಕರ್ಯ ಮತ್ತು ಸುರಕ್ಷತೆ, ಜಿಲ್ಲಾ ಪಂಚಾಯತ್ ವತಿಯಿಂದ ಸ್ವಚ್ಛತೆ, ಕುಡಿಯುವ ನೀರು ಮತ್ತು ತಾತ್ಕಾಲಿಕ ಶೌಚಾಲ ಯಗಳ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡುವಂತೆ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ತಿಮ್ಮಪ್ಪ ಅವರಿಗೆ ಸೂಚಿಸಲಾಯಿತು. ಜನರ ಆರೋಗ್ಯ ರಕ್ಷಣೆಗಾಗಿ ಉತ್ಸವದ ಸ್ಥಳದಲ್ಲಿ 8 ವೈದ್ಯಕೀಯ ಸ್ಟಾಲ್‌ಗಳು ಹಾಗೂ 108 ಅಂಬುಲೆನ್ಸ್ ಸದಾ ಸಿದ್ಧವಿರ ಲಿವೆ. ಕೃತಕ ಜೂ ಮತ್ತು ಸ್ತಬ್ದಚಿತ್ರ: ಅರಣ್ಯ ಇಲಾಖೆ ವತಿಯಿಂದ ಕೃತಕ ಮೃಗಾಲಯ ಹಾಗೂ ವಿಜಯ ನಗರದ ಗತ ವೈಭವ ಸಾರುವ ಸ್ತಬ್ದಚಿತ್ರಗಳು ಜನರ ಕಣ್ಮನ ಸೆಳೆಯಲಿವೆ. ಕ್ರೀಡೆ ಮತ್ತು ಸಾಹಿತ್ಯ: ಸಾಹಸ ಕ್ರೀಡೆ, ಗಾಳಿಪಟ ಉತ್ಸವ, ಶಿಲ್ಪಕಲೆ, ರಂಗೋಲಿ ಸ್ಪರ್ಧೆ ಹಾಗೂ ಕವಿಗೋಷ್ಠಿ, ವಿಚಾರಗೋಷ್ಠಿಗಳ ಮೂಲಕ ಸಾಂಸ್ಕೃತಿಕ ಹಬ್ಬವನ್ನು ಆಯೋಜಿ ಸಲಾಗುವುದು. ಪೊಲೀಸ್ ಇಲಾ ಖೆಯ ವತಿಯಿಂದ ಬಿಗಿ ಬಂದೋ ಬಸ್ತ್ ಏರ್ಪಡಿಸಲಾಗುವುದು ಎಂದು ತಿಳಿಸಿದ ಜಿಲ್ಲಾಧಿಕಾರಿಗಳು, ಅಧಿಕಾರಿಗಳು ಯಾವುದೇ ಗೊಂದಲ ಗಳಿದ್ದಲ್ಲಿ ನೇರವಾಗಿ ಜಿಲ್ಲಾಧಿಕಾರಿ ಅಥವಾ ಸಿಇಒ ಅವರನ್ನು ಸಂಪರ್ಕಿಸಿ ಪರಿಹಾರ ಕಂಡುಕೊಳ್ಳುವಂತೆ ಸಲಹೆ ನೀಡಿದರು. ಸಭೆಯಲ್ಲಿ ಜಿ. ಪಂ. ಸಿಇಒ ನೋಂಗ್ಜಾಯ್ ಮಹಮದ್ ಅಲಿ ಅಕ್ರಂ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ, ಇ.ಬಾಲಕೃಷ್ಣ, ಅನುಪಮ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲಾಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನೆ



ಕಲಬುರಗಿ,ಜ.22-

ನಗರದ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಲಬುರಗಿ ಇವರ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಜಿಲ್ಲಾಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಿಗೆ ದಕ್ಷಿಣ ಮತಕ್ಷೇತ್ರ ಶಾಸಕ ಅಲ್ಲಮಪ್ರಭು ಪಾಟೀಲ ಅವರು ಚಾಲನೆ ನೀಡಿ ದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಶಶೀಲ್ ಜಿ. ನಮೋಶಿ ಹಾಗೂ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ಕ್ರೀಡಾ ಧ್ವಜಾರೋಹಣ ನೆರವೇರಿಸಿ ಬಲೂನ್ ಹಾರಿಸುವ ಮೂಲಕ ಕಾರ್ಯಕ್ರಮಕ್ಕೆ ಶುಭಾರಂಭ ಮಾಡಿದರು.

ರಾಕೇಶ ಚವ್ಹಾಣ, ಅರುಣ ಕುಮಾರ, ನಾಗರಾಜ, ಭೀಮರಡ್ಡಿ ಹಾಗೂ ಬಲಾನ ಗೌಡ ಅವರು ಕ್ರೀಡಾಜ್ಯೋತಿಯನ್ನು ಕ್ರೀಡಾ ಕೂಟದ ವೇದಿಕೆಗೆ ತಂದು ಒಪ್ಪಿಸಿದರು. ಸಂಘದ ಖಜಾಂಚಿ ಶ್ರೀಮಂತ ಪಟ್ಟೇದಾರ ಅವರು ಎಲ್ಲಾ ನೌಕರ ವರ್ಗದವರ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ಅಧ್ಯಕ್ಷ ಬಸವರಾಜ ಬಳೂಂಡಗಿ ಅವರು ಪ್ರಸ್ತಾವಿಕವಾಗಿ ಮಾತನಾಡಿ, ಜಿಲ್ಲಾಮಟ್ಟದ ಕ್ರೀಡಾ ಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಿಗೆ 2050 ಮಂದಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡಿರುವುದಾಗಿ ತಿಳಿಸಿದರು. ''ಸರ್ಕಾರಿ ನೌಕರರು ಕೆಲಸದ ಒತ್ತಡದ ನಡುವೆಯೂ ಕ್ರೀಡಾಕೂಟದಲ್ಲಿ ಭಾಗವಹಿಸಿರುವುದು ಸಂತೋಷದ ವಿಷಯ'' ಎಂದು ಹೇಳಿದರು.

ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯಲ್ಲಿ ಶಿಕ್ಷಕರು ಅನೇಕ ತೊಂದರೆಗಳ ನಡುವೆಯೂ ಸಮೀಕ್ಷೆಯನ್ನು ಯಶಸ್ವಿಗೊಳಿಸಿರುವುದನ್ನು ಅವರು ಶ್ಲಾಘಿಸಿದರು. ''ಎರಡು ದಿನಗಳ ಕ್ರೀಡಾಕೂಟದಿಂದ ಮನಸ್ಸು ಸದೃಢವಾಗುತ್ತದೆ. ಅನೇಕರು ಖಾಲಿ ಹುದ್ದೆಗಳ ಪ್ರಭಾರದಲ್ಲಿಯೇ ಕೆಲಸ ಮಾಡುತ್ತಿದ್ದು, ಇಂತಹ ಸಂದರ್ಭದಲ್ಲಿ ಕ್ರೀಡಾಕೂಟದಲ್ಲಿ ಭಾಗ ವಹಿಸಲು ಜಿಲ್ಲಾಧಿಕಾರಿಗಳು ಅನುಕೂಲ ಮಾಡಿಕೊಟ್ಟಿರುವುದಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ'' ಎಂದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ ಹೂಗಾರ ಅವರು ಅತಿಥಿಗಳನ್ನು ಸ್ವಾಗತಿಸಿದರು. ಸರ್ಕಾರಿ ಪ್ರೌಢಶಾಲೆಯ ಶಿಕ್ಷಕಿ ಆಶಾ ಹೆಗಡೆ ಅವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ, ವಿಭಾಗೀಯ ವೈದ್ಯಾಧಿಕಾರಿ ಡಾ. ಅಂಬರಾಯ ರುದ್ರವಾಡಿ, ಡಿಎಚ್‌ಒ ಡಾ. ಶರಣ ಬಸಪ್ಪ ಖ್ಯಾತನಾಳ, ಆರ್‌ಸಿಎಚ್ ಅಧಿಕಾರಿ ಸಿದ್ದು ಪಾಟೀಲ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಸಂಗಮೇಶ್ವರ, ಗೌರವ ಅಧ್ಯಕ್ಷ ಸುರೇಶ ಎಲ್. ಶರ್ಮಾ, ರಾಜ್ಯ ಪರಿಷತ್ ಸದಸ್ಯ ಧರ್ಮರಾಯ ಜವಳಿ, ಕಾರ್ಯಾಧ್ಯಕ್ಷ ಚಂದ್ರಕಾಂತ ಏರಿ, ಹಿರಿಯ ಉಪಾಧ್ಯಕ್ಷ ಎಂ.ಬಿ. ಪಾಟೀಲ, ಸುರೇಶ ವಗ್ಗೆ, ರಾಜ್ಯ ಸಂಘಟನಾ ಕಾರ್ಯದರ್ಶಿ ಶಿವ ಶಂಕರಯ್ಯ ಮಠಪತಿ, ಸಿದ್ದಲಿಂಗಯ್ಯ ಮಠಪತಿ, ವಿಭಾಗೀಯ ಉಪಾಧ್ಯಕ್ಷ ನಿಜಲಿಂಗಪ್ಪ ಕೆ. ಕೋರಳ್ಳಿ, ವಿಭಾಗೀಯ ಉಪಾಧ್ಯಕ್ಷ ನಿಜಲಿಂಗಪ್ಪ ಮಾನ್ವಿ, ರಾಜ್ಯ ಕ್ರೀಡಾ ಕಾರ್ಯದರ್ಶಿ, ರಾಜ್ಯ ಪರಿಷತ್ ಸದಸ್ಯ ಸಂತೋಷ ಸಲಗರ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಡಿ.ಕೆ.ರಾಜ ರತ್ನ, ಸೇರಿದಂತೆ ವಿವಿಧ ತಾಲೂಕುಗಳ ಅಧ್ಯಕ್ಷರು, ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಜಿಲ್ಲೆಯ ಎಲ್ಲಾ ವೃಂದ ಸಂಘಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.



ಬಸಾಪಟ್ಟಣ ಗ್ರಾಮದಲ್ಲಿ ಮದ್ಯ ಮಾರಾಟ ವಿರುದ್ಧ ಜಾಗೃತಿ ಜಾಥಾ

ಗಂಗಾವತಿ,ಜ.22-

ಅಕ್ರಮ ಮದ್ಯ ಮಾರಾಟದ ವಿರುದ್ಧ ಜನರಿಗೆ ಜಾಗೃತಿ ಮೂಡಿಸಿ ಮದ್ಯ ಮುಕ್ತ ಕಲ್ಯಾಣ ಕರ್ನಾಟಕದ ನಿರ್ಮಾಣಕ್ಕೆ ಕೆ ಆರ್ ಎಸ್ ಪಕ್ಷದ ವತಿಯಿಂದ ತಾಲೂಕಿನ ಬಸಪಟ್ಟಣ ಗ್ರಾಮದಲ್ಲಿ ಅರಿವಿನ ಕ್ರಾಂತಿ (ಕುಡಿತ ಬಿಡಿಸಿ ಸಂಸಾರ ಉಳಿಸಿ) ಜಾಗೃತಿ ಜಾಥಾ ಕಾರ್ಯಕ್ರಮ ನಡೆಯಿತು.

ಬೆಳಿಗ್ಗೆ ಅಂಬೇಡ್ಕರ್ ವೃತ್ತದಿಂದ ಪಕ್ಷದ ಸೈನಿಕರ ನೇತೃತ್ವದಲ್ಲಿ ಆರಂಭವಾದ ಜಾಥಾವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸರಾಯಿ ಬೇಡ,ಶಿಕ್ಷಣ ಬೇಕು.ನಮಗೆ ಬೀರು ಬೇಡ,ನೀರು ಬೇಕು. ಎಂಬ ಘೋಷಣೆ ಕೂಗುತ್ತಾ ಅಕ್ರಮವಾಗಿ ಮದ್ಯ ಮಾರುವ ಅಂಗಡಿಗಳಿಗೆ ಭೇಟಿ ಮಾಡಿ ಅಕ್ರಮ ಮದ್ಯ ಮಾರುವುದನ್ನು ನಿಲ್ಲಿಸುವಂತೆ ಅಂಗಡಿ ಮಾಲೀಕರಿಗೆ ಮನವಿ ಮಾಡಲಾಯಿತು.

ಸಭಾ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಕೆ ಆರ್ ಎಸ್ ಪಕ್ಷದ ಗೌರವಾಧ್ಯಕ್ಷರಾದ ರವಿ ಕೃಷ್ಣಾರೆಡ್ಡಿ ಅವರು ರಾಜ್ಯದಲ್ಲಿ ನಮ್ಮನ್ನು ಆಳುವ ಯಾವುದೇ ಸರ್ಕಾರಗಳು ಜಾರಿ ಮಾಡುತ್ತಿರುವ ಯಾವುದೇ ಜನ ಕಲ್ಯಾಣದ ಯೋಜನೆಗಳು ವಿಶೇಷವಾಗಿ ಬಡತನ ನಿರ್ವಹಣೆಯಂತಹ ವಿಶೇಷ ಯೋಜನೆಗಳು ಗಣನೀಯವಾಗಿ ಫಲ ನೀಡದೇ ಇರುವ ಕಾರಣ ಕಲ್ಯಾಣ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಮದ್ಯ ಮಾರಾಟ ನಡೆ ಯುತ್ತಿದ್ದು ಇದರಿಂದಾಗಿ ಮಹಿಳೆಯರು, ಯುವಕರು, ಬಡವರು, ಹಿಂದುಳಿದವರು, ಸಾಮಾನ್ಯ ಜನರು ಬಲಿಯಾಗುತ್ತಿದ್ದಾರೆ. ಹಾಗಾಗಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವತಿಯಿಂದ ಕಲ್ಯಾಣ ಕರ್ನಾಟಕದ ಭಾಗದ ಹಲವು ಜಿಲ್ಲೆಗಳಲ್ಲಿ ಈ ಜಾಥಾವು ಆಯೋಜಿಸಲಾಗಿದೆ ಎಂದರು.

ಮಹಿಳಾ ಘಟಕದ ರಾಜ್ಯಾಧ್ಯಕ್ಷರಾದ ಆಶಾ ವೀರೇಶ್ ಮಾತನಾಡಿ ಅಧಿಕಾರಿಗಳ ಕರ್ತವ್ಯ ನಿರ್ಲಕ್ಷ್ಯದಿಂದಾಗಿ ಹಾಗೂ ಜನಪ್ರತಿನಿಧಿಗಳ ಸರ್ಕಾರದ ಕಾನೂನು ನಿಯಮಗಳ ಉಲ್ಲಂಘನೆಯಿಂದಾಗಿ ಹಳ್ಳಿ ಹಳ್ಳಿಗಳಲ್ಲಿ, ಅಂಗಡಿಯ ಮುಂಗಟ್ಟುಗಳಲ್ಲಿ, ಹಾದಿ ಬೀದಿಗಳಲ್ಲಿ, ಅಕ್ರಮವಾಗಿ ಸರಾಯಿ ಸಿಗುವಂತಾಗಿದ್ದು ಇದರಿಂದ ಸಾರ್ವಜನಿಕರು ಮದ್ಯ ವ್ಯಸನಿಗಳಾಗುತ್ತಿದ್ದು ಇದರಿಂದ ಸಾಮಾಜಿಕ,ಆರ್ಥಿಕ,ಕೌಟಂಬಿಕ ಸಮಸ್ಯೆಗಳಿಂದ ಖಿನ್ನತೆಗೆ ಒಳಗಾಗಿ ಜೀವನವನ್ನೇ ಹಾಳುಮಾಡಿಕೊಳ್ಳುತ್ತಿರುವ ಪ್ರಸಂಗಗಳು ಇತ್ತೀಚಿನ ದಿನಗಳಲ್ಲಿ ಕಾಣುತ್ತೇವೆ ಎಂದರು.

ಇದೇ ಸಂದರ್ಭದಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ದೀಪ ಮುನ್ನೂರು, ರಮೇಶ್ ಗೌಡ, ಶಕುಂತಲಾ ನಿರುಪಾದಿ ಕೆ ಗೋಮರ್ಸಿ,ಕನಕಪ್ಪ ಉಡೆಜಾಲಿ, ವೆಂಕಟೇಶ್ ಯುವಧ್ವನಿ, ಅನು ಸ್ವಾಮಿ, ಶರಣಪ್ಪ ದೊಡ್ಡಮನಿ,ನಿರ್ಮಲ,ಸಿದ್ದಮ್ಮ, ಗಣೇಶ್ ಅಮೃತ್,ಗಣೇಶ್ ಸಾರಂಗಿ,ಮೈನುದ್ದೀನ್,ನಾಗರಾಜ ಕಮ್ಮಾರ್,ಬಸವರಾಜ, ಶಾಮೀದ್ ಅಲಿ,ನಾಗಪ್ಪ ಕಂಬಳಿ,ವೀರೇಶ್ ಉಡಮಕಲ್,ಮೆಹಬೂಬ್, ಅಹಮದ್, ಮುದಿಯಪ್ಪ, ಯಾಕುಬ್, ಮಹಮದ್, ಮೇರಿ,ಮಮತಾ,ರೇಖಾ,ತರಂಗಿಣಿ,ಪುಷ್ಪ ಸೇರಿದಂತೆ ನೂರಾರು ಜನ ಭಾಗವಹಿಸಿದ್ದರು.

ಅಂಬಿಗರ ಚೌಡಯ್ಯನವರಂತೆ ಮಹಾತ್ಮರ ತತ್ವಾದರ್ಶಗಳನ್ನು ಬೆಳೆಸಿಕೊಳ್ಳಿ: ಎಚ್.ಟಿ.ಪೋತೆ

ಕಲಬುರಗಿ,ಜ.22-

ನಿಜಶರಣ ಅಂಬಿಗರ ಚೌಡಯ್ಯನವರಂತೆ ಮಹಾತ್ಮರ ತತ್ವಾದರ್ಶಗಳನ್ನು ಬೆಳೆಸಿಕೊಂಡು ಎದೆಯಲ್ಲಿ ಡಾ.ಅಂಬೇಡ್ಕರ್ ಅವರ ಸಂವಿಧಾನ ಮುಂದಿಟ್ಟುಕೊಂಡು ಶಿಕ್ಷಣ ಪಡೆದುಕೊಳ್ಳಬೇಕು ಎಂದು ಗುಲ್ಬರ್ಗಾ ವಿವಿಯ ಕನ್ನಡ ಅಧ್ಯಯನ ಸಂಸ್ಥೆ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಅಧ್ಯಯನ ಪೀಠದ ನಿರ್ದೇಶಕ ಎಚ್.ಟಿ. ಪೋತೆ ಅವರು ಕರೆ ನೀಡಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಹಾಗೂ ಕೋಲಿ ಸಮುದಾಯದ ಆಶ್ರಯದಲ್ಲಿ ಬುಧವಾರ ಹಮ್ಮಿ ಕೊಂಡಿದ್ದ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ 906 ನೆಯ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಪುಷ್ಪಾರ್ಚನೆ ಮಾಡಿ ವಿಶೇಷ ಉಪನ್ಯಾಸಕರಾಗಿ ಮಾತನಾಡಿದರು.

12 ನೆಯ ಶತಮಾನದ ನಿಜ ಶರಣ ಅಂಬಿಗರ ಚೌಡಯ್ಯ ಅವರು ಕ್ರಾಂತಿಕಾರಿ ಸ್ವಾಭಿಮಾನಿಗಳಾಗಿದ್ದರು. ಅವರಂತೆಯೇ ಇಂದು ಶಿಕ್ಷಣ ಪಡೆದು ಅರಿವು ಪಡೆದುಕೊಳ್ಳಬೇಕಾಗಿದೆ. ಶಿಕ್ಷಣದಿಂದಲೇ ಸಮಾಜದ ಅಭಿವೃದ್ಧಿ, ಮೀಸಲಾತಿ ಹಕ್ಕು ಸಿಗಲಿವೆ ಎಂದು ಅಭಿಪ್ರಾಯಪಟ್ಟರು. ಅಂಬಿಗರ ಚೌಡಯ್ಯ ಅವರು ನಿಮ್ನ ಶೋಷಿತರ ಪರವಾಗಿ ಹೋರಾಟ ಮಾಡಿದ್ದವರು. ಅಸ್ಪೃಶ್ಯತೆ ಕಂಡು ಬೇಸತ್ತು ಹೋಗಿದ್ದ



ಚೌಡಯ್ಯ ನವರದ್ದು ಬಹುದೊಡ್ಡ ವ್ಯಕ್ತಿತ್ವ ಎಂದು ಪ್ರತಿಪಾದಿಸಿದರು.

ಸಂವಿಧಾನದ ಹೆಸರಿನಲ್ಲಿ ದೇಶ ನಡೆಸುತ್ತಿದ್ದಾರೆ, ಆದರೆ ಸಂವಿಧಾನ ದಿನೇ ದಿನೇ ಕ್ಷೀಣಿಸುತ್ತಿದೆ. ಅದರ ಬಗ್ಗೆ ಜಾಗೃತರಾಗಬೇಕಿದೆ ಎಂದ ಅವರು ಒಂದು ವೇಳೆ ಸಂವಿಧಾನ ಇರಲಿಲ್ಲ ಅಂದರೆ ಹೆಣ್ಣುಮಕ್ಕಳು ಯಾರೂ ಕೂಡ ವೇದಿಕೆಯ ಮೇಲೆ ಇರುತ್ತಿರಲಿಲ್ಲ. ಸಂವಿಧಾನ ಕೊಟ್ಟಿರುವ ಇಂತಹ ಹಕ್ಕುಗಳು ಸಮುದಾಯದ ಉಳಿವಿಗಾಗಿ ಬಳಸಿಕೊಳ್ಳಿ ಎಂದರು.

ವಿಧಾನ ಪರಿಷತ್ ಶಾಸಕರಾದ ತಿಪ್ಪಣ್ಣಪ್ಪ ಕಮಕನೂರ ಮಾತನಾಡಿ, ಅಂಬಿಗರ ಚೌಡಯ್ಯನವರ ಅಭಿವೃದ್ಧಿ ನಿಗಮ ಸ್ಥಾಪಿಸಿ, ಅದಕ್ಕೆ 300 ಕೋಟಿ ಅನುದಾನ ನೀಡುವಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು, ಮಾತಾ ಮಣಿಕೇಶ್ವರಿ ಅಭಿವೃದ್ಧಿ ಪ್ರಾಧಿಕಾರ ಮಾಡಲಾಗಿದೆ. ಇದಕ್ಕೆ ಸೂಕ್ತ ಅನು ದಾನ ನೀಡಬೇಕು, ಕೋಲಿ ಸಮು ದಾಯವನ್ನು ಎಸ್.ಟಿ ಪಟ್ಟಿಗೆ ಸೇರಿಸ ಬೇಕೆಂದು ಒತ್ತಾಯಿಸಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಅಲ್ಲಮಪ್ರಭು ಪಾಟೀಲ್ ಮಾತನಾಡಿ, ಕೋಲಿ ಸಮುದಾಯಕ್ಕೆ ಎಸ್.ಟಿ ಪಟ್ಟಿಗೆ ಸೇರ್ಪಡೆ ಕುರಿತಾಗಿ ಮುಖ್ಯ ಮಂತ್ರಿಗಳಿಗೆ ನಿಯೋಗ ಹೋಗಿದ್ದೇವೆ. ಶೀಘ್ರದಲ್ಲೇ ಎಸ್.ಟಿ ಗೆ ಸೇರಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದು ಹೇಳಿದರು. ಭಾರತ ಸಂವಿಧಾನ ಸಂಸತ್ತು ಮತ್ತು ಪ್ರಜಾಪ್ರಭುತ್ವದ ವ್ಯವಸ್ಥೆ ಮುಂಚೆ ಸುಮಾರು 7 ಶತಮಾನಗಳ ಮೊದಲೆ ಮುನ್ನಡಿ ಬರೆದವರು ನಿಜಶರಣ ಅಂಬಿಗರ ಚೌಡಯ್ಯ ಅವರ ಆದರ್ಶಗಳು ಮೌಲ್ಯಗಳು ನಮ್ಮ ಜೀವನದಲ್ಲಿ ಅಳವಡಿಸಿಕೊ ಳ್ಳಬೇಕು ಎಂದರು.

ಸುಲಫಲ ಮಠದ ಸಾರಂಗ ಧಾರ ದೇಶಿಕೇಂದ್ರದ ಮಹಾಸ್ವಾಮೀಜಿ, ಮಲ್ಲಣ್ಣಪ್ಪ ಮುತ್ಯಾ ತೋನಸನಳ್ಳಿ ಸಾನಿಧ್ಯ ವಹಿಸಿ ಮಾತನಾಡಿದರು.

ಪ್ರತಿಭಾವಂತ ಮಕ್ಕಳಿಗೆ ಲ್ಯಾಪ್ ಟಾಪ್, ಅಂಗವಿಕಲ ಮಕ್ಕಳಿಗೆ ತ್ರಿಚಕ್ರ ಸೈಕಲ್ ವಿತರಿಸಲಾಯಿತು. ಸಮಾ ಜದ ಮುಖಂಡರಾದ ಬಸವರಾಜ ಬೂದಿಹಾಳ ಅವರು ಪ್ರಸ್ತಾವಿಕ ಮಾತನಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕಿ ಜಗದೀಶ್ವರಿ ನಾಸಿ ಅವರು ಸ್ವಾಗತಿಸಿ ದರು. ಶಿವಾನಂದ ಅಣಜಗಿ ನಿರೂಪಿ ಸಿದರು.

ಇದಕ್ಕೂ ಮುನ್ನ ವಚನ ಗ್ರಂಥ ಹಾಗೂ ಅಂಬಿಗರ ಚೌಡಯ್ಯನವರ ಮೂರ್ತಿಗೆ ಹೆಲಿಕ್ಯಾಪ್ಟರ್ ಮೂಲಕ ಬಿ.ಫೌಜಿಯಾ ತರನ್ನುಮ್, ಪೋಲಿಸ್ ನಗರ ಆಯುಕ್ತ ಶರಣಪ್ಪ ಎಸ್.ಡಿ. ಎಸ್.ಪಿ. ಅಡ್ಡರೂ ಶ್ರೀನಿವಾಸ, ಗ್ರಾಮೀಣ ಶಾಸಕ ಬಸವರಾಜ ಮತ್ತಿ ಮಡು, ಸೇರಿದಂತೆ ಅನೇಕ ಗಣ್ಯರು ಪುಷ್ಪಾರ್ಚನೆ ಮಾಡಲಾಯಿತು.

ಪಾಲಿಕೆಯ ಆವರಣದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿ ಪ್ರತಿಷ್ಠಾಪನೆಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು. ವಿವಿಧ ವಾದ್ಯ, ಗೊಂಬೆಗಳ ಪ್ರದರ್ಶನ, ನಾಸಿಕ ಡೋಲ್, ಜನಪದ ಕಲಾ ತಂಡಗಳು, ಹುಲಿ ಕುಣಿತ ಸೇರಿದಂತೆ ವಿವಿಧ ವೇಷಧಾರಿಗಳ ಮೂಲಕ ನಡೆಯುವ ಮೆರವಣಿಗೆಯು ಡಾ.ಎಸ್.ಎಂ.ಪಂಡಿತ್ ರಂಗಮಂದಿರಕ್ಕೆ ತಲುಪಿದವು. ಮುಖಂಡ ಬಸವರಾಜ ಬೂದಿ ಹಾಳ ಅವರು ಪ್ರಸ್ತಾವಿಕ ಮಾತನಾಡಿ ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕಿ ಜಗ ದೀಶ್ವರಿ ನಾಸಿ ಅವರು ಸ್ವಾಗತಿಸಿದರು. ಶಿವಾನಂದ ಅಣಜಗಿ ನಿರೂಪಿಸಿದರು.

ಬಸವರಾಜ್ ಬಳ್ಳಾರಿ ಭಾರತ ನಾಟ್ಯ ಪ್ರದರ್ಶಿಸಿ ಗಮನ ಸೆಳೆದರು. ಬಸವರಾಜ ಶೃಂಗೇರಿ ಹಾಗೂ ಅವರ ತಂಡದಿಂದ ನಾಡಗೀತೆ ಪ್ರಸ್ತುತ ಪಡಿಸಲಾಯಿತು.

ಮಹಾನಗರ ಪಾಲಿಕೆ ಮಹಾಪೌರರಾದ ವರ್ಷಾಜಾನೆ,ಬಿ.ಜಿ ಪಾಟೀಲ್, ಶಶೀಲ್ ನಮೋಶಿ, ಮಾಜಿ ಸಚಿವ ಮಾಲೀಕಯ್ಯ ಗುತ್ತೇದಾರ್, ಕೆಕೆಆರ್ ಟಿಸಿ ಅಧ್ಯಕ್ಷ ಅರುಣಕುಮಾರ್ ಪಾಟೀಲ್, ಕುಡಾ ಅಧ್ಯಕ್ಷ ಮಝುಹರ್ ಖಾನ್ ಆಲಂ, ಜೆಸ್ಕಾಂ ಅಧ್ಯಕ್ಷ ಪ್ರವೀಣ್ ಪಾಟೀಲ್ ಅನುಪಮಾ ಕಮಕನೂರು, ಕಾಂಗ್ರೆಸ್ ಮುಖಂಡ ನೀಲಕಂಠರಾವ ಮೂಲಗೆ, ಅವ್ವಣ್ಣ ಮ್ಯಾಕೇರಿ, ವಾಣಿ ಸಗರಕರ, ಸೇರಿದಂತೆ ಹಲವರು ಉಪಸ್ಥಿತರಿದ್ದರು. ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಜಯಪ್ರಕಾಶ ಕಮಕನೂರ ಸೇರಿದಂತೆ ಹಲವರು ಇದ್ದರು.

ಒಂದನೇಯ ಪುಟದಿಂದ

ರಾಜ್ಯಪಾಲರು ಸಂವಿಧಾನ ಉಲ್ಲಂಘಿಸಿದ್ದಾರೆ,ರಾಜ್ಯದಲ್ಲಿ ಪ್ರತಿಭಟನೆ : ಸಿಎಂ

ಮರೆಮಾಚಲು ರಾಜ್ಯಪಾಲರ ಕೈಯಲ್ಲಿ ಬೇರೆ ಭಾಷಣವನ್ನು ಓದಿಸಿದ್ದಾರೆ. ಇದು ಸಂವಿಧಾನ ಬಾಹಿರ ಕೃತ್ಯ. ರಾಜ್ಯಪಾಲರು ತಮ್ಮ ಕರ್ತವ್ಯವನ್ನು ಪಾಲನೆ ಮಾಡಿಲ್ಲ ಎಂದರು.

ಕಾನೂನು ಹೋರಾಟದ ಬಗ್ಗೆ ಚರ್ಚೆ: ಸರ್ಕಾರ ಸಿದ್ದಪಡಿಸಿರುವ ಭಾಷಣದ ಪ್ರತಿಯನ್ನು ಎಲ್ಲ ಶಾಸಕರು ಎಂಎಲ್‌ಸಿಗಳಿಗೆ ವಿತರಿಸಲಾಗಿದೆ. ಈ ವಿಚಾರದ ಬಗ್ಗೆ ಸುಪ್ರೀಂ ಕೋರ್ಟ್ ಮೊಕದ್ದಮೆ ಹೂಡುವ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಶಾಸಕರಿಗೆ ಜೀವ ಬೆದರಿಕೆ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ-ಗಂಭೀರ ಆರೋಪ

ಬಾವುಟ ಪ್ರದರ್ಶನ ಮಾಡಲಾಗು ವುದು ಎಂದು ಎಂ. ವಿರೂಪಾಕ್ಷಿ ಎಚ್ಚರಿಕೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಣ್ಣನರಸಿಂಹ ನಾಯಕ್, ಅಮರೇಶ್, ರಾಮಕೃಷ್ಣ, ನಾಗರಾಜ್ ಗೌಡ, ವಿಜಯ್ ಕುಮಾ್ರ, ನರಸಪ್ಪ ಸೇರಿ ದಂತೆ ಇತರರು ಉಪಸ್ಥಿತರಿದ್ದರು.

ಜಿಲ್ಲೆಯಲ್ಲಿ ಅಕ್ರಮ ಮರಳು ಗಣಿಗಾರಿಕೆಗೆ ತಡೆಗೆ ಇಲಾಖೆ ಸಕ್ರಿಯ : ಐಜಿಪಿ ಹರ್ಷಾ ಎಚ್ಚರಿಕೆ

ಮರಳುಗಣಿಗಾರಿಕೆ ತಡೆಗೆ ಪೊಲೀಸ್ ಇಲಾಖೆಯ ಜೊತರ ಗಣಿ ಮತ್ತು ಭೂ ವಿಜ್ಞಾನ, ಕಂದಾಯ ಇಲಾಖೆಯ ಪಾತ್ರವೂ ಮುಖ್ಯವಾಗಿದೆ ಹೆಚ್ಚು ಕ್ರಿಯಾಶೀಲರಾಗಬೇಕು. ಟಾಸ್ಕ್ ಫೋರ್ಸ್ ಸಮಿತಿಯಲ್ಲಿರುವ ಅಧಿಕಾರಿಗಳು ಅಗತ್ಯ ಸಹಕಾರ ನೀಡಬೇಕು ಈ ಕುರಿತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ಮಾಡಿ ಚರ್ಚಿಸಲಾಗುವುದು ಎಂದರು.

ಶಾಸಕಿ ಜಿ ಕರೆಮ್ಮ ನಾಯಕಗೆ ಭದ್ರತೆ: ಅಕ್ರಮ ಮರಳು ಸಾಗಣೆ ತಡೆಗೆ ಮುಂದಾಗಿರುವ ದೇವದುರ್ಗ ಶಾಸಕಿ ಕರೆಮ್ಮಾ ನಾಯಕ ಅವರಿಗೆ ಬೆದರಿಕೆ ಹಾಕಿದ ಕುರಿತು ದೇವದುರ್ಗ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ತನಿಖೆ ಆರಂಭವಾಗಿದೆ, ಪ್ರಕರಣದ ಆರೋಪಿಗಳಿಗೆ ನೋಟಿಸ್ ನೀಡಲಾಗಿದೆ. ತಪ್ಪಿತಸ್ಥರಾದರೆ ಕ್ರಮ ಕೈಗೊಳ್ಳಲಿದ್ದಾರೆ. ಶಾಸಕಿ ಮಾತ್ರವಲ್ಲ ಸಾಮಾನ್ಯ ನಾಗರಿಕರಿಗೂ ಭದ್ರತೆ ಒದಗಿಸುವುದು ಪೊಲೀಸ್ ಇಲಾಖೆಯ ಕರ್ತವ್ಯ. ಅವರಿಗೆ ಅಗತ್ಯ ರಕ್ಷಣೆ ನೀಡಲಾಗುವುದು ಎಂದು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪೊಲೀಸರಮೇಲೆ ಸವಾರಿ ಮಾಡಿದರೆ ಕಠಿಣ ಕ್ರಮ: ರಾಯಚೂರು ಜಿಲ್ಲೆಯಲ್ಲಿ ಖಾಲಿ ಇರುವ ಪೊಲೀಸ್ ಸಿಬ್ಬಂದಿ ಗಳ ಭರ್ತಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಬೇರೆ ಜಿಲ್ಲೆಯಷ್ಟು ತೀವ್ರ ವಿಕೋಪದ ಪರಿಸ್ಥಿತಿ ಇಲ್ಲ. ಪೊಲೀಸರ ಮೇಲಿನ ಒತ್ತಡ ನಿವಾರಣೆಗೆ ಅನೇಕ ಯೋಜನೆ ರೂಪಿಸಲಾಗಿದೆ. ಕರ್ತವ್ಯನಿರತ ಪೊಲೀಸರ ಮೇಲೆ ಹಲ್ಲೆ, ಅಡ್ಡಿಪಡಿಸುವುದು ಸಂಜ್ಞೆಯ ಅಪರಾಧವಾಗಿದೆ. ಪೊಲೀಸ್ ಇಲಾಖೆ ಪ್ರಜಾಪ್ರಭುತ್ವ ಭದ್ರವಾಗಿಡಲು ಕೆಲಸ ಮಾಡುವ ಒಂದು ವ್ಯವಸ್ಥೆ. ಖಾಕಿಯ ಮೇಲೆ ಸವಾರಿ ಮಾಡಲು ಯತ್ನಿಸಿದರೆ ಸುಮ್ಮನಿರಲ್ಲ, ಅವರು ರಾಜಕೀಯ ನಾಯಕರಾಗಲಿ, ಅಧಿಕಾರಸ್ಥರಾಗಿರಲಿ ಕಾನೂನುಬದ್ಧವಾಗಿ ಕ್ರಮ ಕೈಗೊಳ್ಳುತ್ತೇವೆ. ಪೊಲೀಸರು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಭಯಮುಕ್ತವಾಗಿ ಕೆಲಸ ಮಾಡಬೇಕು ಏನೇ ಅಡ್ಡಿಆತಂಕಗಳಿದ್ದರೂ ಹಿರಿಯ ಅಧಿಕಾರಿಗಳ ನೆರವು ಸಿಗಲಿದೆ ಎಂದು ಸ್ಪಷ್ಟಪಡಿಸಿದರು.

ಜಿಲ್ಲೆಯಲ್ಲಿ ಸೈಬರ್ ಕ್ರೈಮ್ ಪೊಲೀಸ್ ಠಾಣೆ ಶಸಕ್ತವಾಗಿದೆ. ಈಗ 10 ವರ್ಷದಲ್ಲಿ ಕಳ್ಳತನ ಆಗುವಷ್ಟು 6 ತಿಂಗಳಲ್ಲಿ ಸೈಬರ್ ಕಳ್ಳತನವಾಗುತ್ತಿವೆ. ಸೈಬರ್ ವಂಚನೆ ತಡೆಗೆ ಪೊಲೀಸರಿಗೆ ಆಧುನಿಕ ತಂತ್ರಜ್ಞಾನ ಸೇರಿ ಎಲ್ಲಾ ರೀತಿಯ ಸಹಾಯ ನೀಡಲಾಗಿದೆ. ಅನೇಕರಿಗೆ ತರಬೇತಿ ನೀಡಿದ್ದರಿಂದ ಪರಿಣಿತರಾಗಿದ್ದಾರೆ. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ವಂಚನೆಗೊಳಗಾದವರು ಗೋಲ್ಡನ್ ಹವ(r ಹಣ ಕಳೆದುಕೊಂಡ ಒಂದುತಾಸಿನೊಳಗಿನ ಅವಧಿ) ನಲ್ಲಿ ಸೈಬರ್ ಠಾಣೆಗೆ ಸಂಪರ್ಕಿಸಿದರೆ ಹಣ ವಾಪಸ್ ಸಿಗಲಿದೆ ತಡವಾಗಿದ್ದಲ್ಲಿ ರಿಕವರಿ ಕಷ್ಟ ಹೀಗಾಗಿ ಸಾರ್ವಜನಿಕರು ಹೆಚ್ಚು ಜಾಗರುಕರಾಗಬೇಕು ಎಂದು ಸಲಹೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಸು ಗಿರಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ಡಿವೈಎಸ್ ಪಿ ಶಾಂತವೀರ ಮತ್ತಿತರರು ಇದ್ದರು

ಜನಪ್ರತಿನಿಧಿಗಳ ಆಡಳಿತವನ್ನೇ ಮುಂದುವರಿಸಲು ಆಗ್ರಹ

ಸಮಿತಿಯ ಅವಧಿಯನ್ನು ಆರು ತಿಂಗಳು ವಿಸ್ತರಿಸಬೇಕು ಎಂದು ಆಗಿನ ಸರ್ಕಾರವನ್ನು ಒತ್ತಾಯಿಸಿದ್ದರು ಎಂದರು.

ಇದಲ್ಲದೆ, 1990ರ ದಶಕದಲ್ಲಿಯೂ ಗ್ರಾಮ ಪಂಚಾಯತಿಗಳ ಅವಧಿಯನ್ನು ವಿಸ್ತರಿಸಿ ಪ್ರಜಾಪ್ರಭುತ್ವವನ್ನು ಕಾಪಾಡಿದ ಉದಾಹರಣೆಗಳು ರಾಜ್ಯದಲ್ಲಿವೆ ಎಂಬುದನ್ನು ಸರ್ಕಾರ ಪರಿಗಣಿಸಬೇಕೆಂದರು.

ಸುದ್ದಿಗೊಷ್ಟಿಯಲ್ಲಿ ರವಿಗೌಡ ಮಲ್ಲದಗುಡ್ಡ,ರಂಗನಗೌಡ, ಹುಸೇನಪ್ಪ, ಪುಟ್ಟಪ್ಪ, ಲಕ್ಷ್ಮಣ್, ರಮೇಶ್, ಬಸವರಾಜ್ ಇದ್ದರು.

ಭೂ ಒಡೆತನ ಯೋಜನೆ ಜಾರಿಯಲ್ಲಿ ನಿರ್ಲಕ್ಷ್ಯ:ಖಂಡನೆ

ಅವರು ದಿನಾಂಕ 28-11-2025 ರಂದು ಜಿಲ್ಲೆಯ ಎಲ್ಲಾ ನಿಗಮಗಳ ಜಿಲ್ಲಾ ವ್ಯವಸ್ಥಾಪಕರಿಗೂ ಹಾಗೂ ಜಿಲ್ಲಾಧಿಕಾರಿಗಳಿಗೂ ಶಿಫಾರಸ್ಸು ಪತ್ರ ನೀಡಿದ್ದರೂ ಸಹ ಯಾವುದೇ ಪ್ರಗತಿ ಕಂಡುಬಂದಿಲ್ಲ ಎಂದರು. ಒಂದು ವಾರದೊಳಗೆ ಕ್ರಮ ಕೈಗೊಳ್ಳದಿದ್ದರೆ, ಜನವರಿ 26ರಂದು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಶರಣು ಪ್ರಕಾಶ್ ಪಾಟೀಲ್ ಅವರಿಗೆ ಪ್ರತಿಭಟನೆ ಮೂಲಕ ಮನವಿ ಪತ್ರ ಸಲ್ಲಿಸಿ ತಮ್ಮ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೊಷ್ಟಿಯಲ್ಲಿ ಎಸ್ ತಿಮ್ಮಪ್ಪ, ಹನುಮೇಶ್ ಸೇರಿದಂತೆ ಇತರರು ಇದ್ದರು.

ಅಂಬಿಗರ ಚೌಡಯ್ಯನವರ ಜೀವನ ಮೌಲ್ಯಗಳನ್ನು ಅರಿಯೋಣ: ಸಚಿವ ಬೋಸರಾಜು ಸಲಹೆ

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ವಿಧಾನ ಪರಿಷತ್ ಶಾಸಕರಾದ ಎ.ವಸಂತಕುಮಾರ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಸು ಗಿರಿ, ರಾಯಚೂರು ಮಹಾನಗರ ಪಾಲಿಕೆಯ ಉಪ ಆಯುಕ್ತರಾದ ಸಂತೋಷ ರಾಣಿ, ಸಮಾಜದ ಮುಖಂಡರಾದ ಕೆ.ಶರಣಪ್ಪ, ಲಲಿತಾ ಕಡಗೋಳ, ಶರಣಪ್ಪ ಕಡಗೋಳ, ಕುರ್ಡಿ ಲಕ್ಷ್ಮಣ, ರಂಗ ದೇಸಾಯಿ, ರಾಜೇಶ್ವರಿ ಸೇರಿದಂತೆ ಇತರರು ಇದ್ದರು.

ಗಣ್ಯರಿಂದ ಮಾಲಾರ್ಪಣೆ: ವೇದಿಕೆಯ ಕಾರ್ಯಕ್ರಮಕ್ಕೂ ಮೊದಲು ನಗರದ ಬಿ.ಆರ್.ಬಿ. ಸರ್ಕಲ್ ಹತ್ತಿರವಿರುವ ಅಂಬಿಗರ ಚೌಡಯ್ಯನವರ ಪುತ್ಥಳಿ ನಡೆದ ಕಾರ್ಯಕ್ರಮದಲ್ಲಿ ಕಿಲ್ಲೇ ಬೃಹನ್ಮಠದ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮೀಜಿ, ಸೋಮವಾರಪೇಟೆ ಹಿರೇಮಠದ ಅಭಿನವ ರಾಚೋಟಿ ವೀರಶಿವಾಚಾರ್ಯ ಸ್ವಾಮೀಜಿ ಹಾಗೂ ಸಚಿವರಾದ ಎನ್.ಎಸ್.ಬೋಸರಾಜು, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಎ.ವಸಂತಕುಮಾರ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಸು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಸೇರಿದಂತೆ, ಮಾಜಿ ಸಂಸದರಾದ ಬಿ.ವಿ.ನಾಯಕ, ಮಾಜಿ ಶಾಸಕರಾದ ಎ.ಪಪ್ಪರೆಡ್ಡಿ, ರಾಯಚೂರು ನಗರಸಭೆಯ ಮಾಜಿ ಅಧ್ಯಕ್ಷರಾದ ಲಲಿತಾ ಕಡಗೋಳ, ಮುಖಂಡರಾದ ಕೆ.ಶಾಂತಪ್ಪ, ಕೆ.ಶರಣಪ್ಪ, ಕುರ್ಡಿ ಲಕ್ಷ್ಮಣ, ಹೊನ್ನಪ್ಪ, ಶ್ರೀನಿವಾಸ್, ಪಿ.ಪರಮೇಶ್, ಕೆ.ತಿಮ್ಮಪ್ಪ, ಪಿ.ಈರೇಶ, ಈರೇಶ ಜಾಲಗೇರಿ, ಕೆ.ನರಸಿಂಹ, ಇ.ಶಿವರಾಮ್, ಹನುಮಂತು ಕಡಗೋಳ ಸೇರಿದಂತೆ ಇತರರು ಅಂಬಿಗರ ಚೌಡಯ್ಯನವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪತ್ರಕರ್ತರ ಸಭೆ ಪತ್ರಕರ್ತರ ಒತ್ತಾಸೆಯಿಂದಲೇ ರಾಯಚೂರು ಉತ್ಸವ-2026 ಸಾಧ್ಯ

ಲಾಗುತ್ತಿದೆ. ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಿದ ಜಿಲ್ಲೆಯ ಗಣ್ಯರು, ನಾಗರಿಕರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿ ಗಳಿಂದ ಬಂದ ಸಲಹೆಗಳನ್ನು ಪರಿಗಣಿಸಿ ಉತ್ಸವದ ಕಾರ್ಯಕ್ರಮ ರೂಪಿಸ ಲಾಗಿದೆ ಎಂದು ಹೇಳಿದರು.ಪತ್ರಕರ್ತರ ಕೋರಿಕೆಯಂತೆ ಉತ್ಸವದ ಅವಧಿಯಲ್ಲಿ ಪತ್ರಕರ್ತ ರಿಗಾಗಿಯೇ ಪ್ರತ್ಯೇಕ ಮಾಧ್ಯಮ ಗೋಷ್ಠಿಯನ್ನು ನಡೆಸಲಾಗುವುದು. ಹೊರ ಜಿಲ್ಲೆಗಳಿಂದ ಆಗಮಿಸುವ ಪತ್ರಕರ್ತರಿಗೆ ವಸತಿ ವ್ಯವಸ್ಥೆ, ಸುದ್ದಿ ಸಂಗ್ರಹಕ್ಕೆ ಅನುಕೂಲವಾಗುವಂತೆ ಸಂಚಾರಕ್ಕಾಗಿ ಬಸ್ ವ್ಯವಸ್ಥೆ, ಮೂರೂ ದಿನಗಳ ಕಾಲ ಊಟದ ವ್ಯವಸ್ಥೆ ಹಾಗೂ ಪ್ರವೇಶ ಪಾಸ್ಗಳನ್ನು ನೀಡಲಾಗುತ್ತದೆ ಎಂದು ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು.

ಸಭೆಯಲ್ಲಿ ಪತ್ರಕರ್ತರಾದ ಆರ್.ಗುರುನಾಥ, ಕೆ.ಸತ್ಯನಾರಾಯಣ, ಚನ್ನಬಸವ ಬಾಗಲವಾಡ, ಚಂದ್ರಕಾಂತ ಮಸಾನಿ, ಅರವಿಂದ ಕುಲಕರ್ಣಿ, ಖಾನ್ ಸಾಬ್ ಮೊಮಿನ್, ರಾಚಯ್ಯ ಸ್ವಾಮಿ, ಸಿದ್ದು ಬಿರಾದಾರ, ಸಿದ್ದಯ್ಯ ಸ್ವಾಮಿ, ವಾಗೀಶ್ ಪಾಟೀಲ ಸೇರಿದಂತೆ ಇನ್ನಿತರರು ಉತ್ಸವ ಸಂಬಂಧಿಸಿದಂತೆ ವಿವಿಧ ಸಲಹೆಗಳನ್ನು ನೀಡಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ, ಉತ್ಸವ ಪ್ರಚಾರ ಸಮಿತಿಯ ಅಧ್ಯಕ್ಷ ಸಂತೋಷ್ ರಾಣಿ, ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಹಾಗೂ ವಿವಿಧ ಪತ್ರಿಕೆ ಮತ್ತು ಸುದ್ದಿ ವಾಹಿನಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಡಿ ದೇವರಾಜ ಅರಸ್ ಶಾಲೆಯಲ್ಲಿ ಅಂಬಿಗರ ಚೌಡಯ್ಯನ ಜಯಂ



ಸುರಪುರ,ಜ.22-

ಸೈದಾಪೂರಿನ ಡಿ ದೇವರಾಜ ಅರಸ್ ಶಾಲೆಯಲ್ಲಿ ಅಂಬಿಗರ ಚೌಡಯ್ಯನ ಜಯಂತೋತ್ಸವ ಆಚರಣೆ ಮಾಡಲಾಯಿತು.

ಶಾಲೆಯ ಮುಖ್ಯೋ ಪಾಧ್ಯಾಯರಾದ ಸಂತೋಷ್ ಅವರು ಅಂಬಿಗರ ಚೌಡಯ್ಯನ ಜೀವನ ಸಾಧನೆಗಳನ್ನು ಓದಿ ಅವರಲ್ಲಿರುವ ಆದರ್ಶ ವಿಚಾರಗಳನ್ನು ನಾವು ಅಳವಡಿಸಿಕೊಳ್ಳಬೇಕಾದುದು ಆದ್ಯ ಕರ್ತವ್ಯವಾಗಿದೆ ಎಂದು ಹೇಳಿದ್ದಾರೆ.

ಅವರ ವೃತ್ತಿಯಲ್ಲಿ ದೋಣಿ ನಡೆಸುವ ಕಾಯಕವಾಗಿದ್ದು ಜನರನ್ನು ತುಂಬಿದ ಹೊಳೆಯ ಒಂದು ದಡ ದಿಂದ ಮತ್ತೊಂದು ದಡಕ್ಕೆ ಜನರನ್ನು

ಸಾಗಿಸುವುದರ ಜೊತೆಗೆ ಅಜ್ಞಾನದಲ್ಲಿ ಮುಳುಗಿದ ಜನತೆಯನ್ನು ಸುಜ್ಞಾನದ ಎಂಬ ದಡ ಸೇರಿಸುವಲ್ಲಿ ಅವರ ವಚನಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರು ಎಂದು ಮಕ್ಕಳಿಗೆ ನಿಜಶರಣ ಅಂಬಿಗರ ಚೌಡಯ್ಯನವರ ಕುರಿತು ಮುಖ್ಯ ಗುರುಗಳು ಮಕ್ಕಳಿಗೆ ಹೇಳಿದರು.

ಈ ಸಂದರ್ಭದಲ್ಲಿ ಶಾಲೆಯ ಸಹಶಿಕ್ಷಕರು ಹಾಗೂ ಶಾಲೆಯ ಮಕ್ಕಳು ಕಾರ್ಯಕ್ರಮದಲ್ಲಿ ಇದ್ದರು.

ನಗದು ಕೊರತೆ: ಬ್ಯಾಂಕ್ ಗಳು ಸುಗಮ ಕಾರ್ಯನಿರ್ವಹಣೆಗೆ ಸಾರ್ವಜನಿಕರು ಸಹಕರಿಸುವಂತೆ ಮನವಿ

ಯಾದಗಿರಿ,ಜ.22-

ಕಳೆದ ಕೆಲವು ದಿನಗಳಿಂದ ಯಾದಗಿರಿ ಜಿಲ್ಲೆಯಲ್ಲಿ ನಗದು ಕೊರತೆ ಉಂಟಾಗಿದ್ದು, ಸಾರ್ವಜನಿಕರು ಮನಗಂಡು ಬ್ಯಾಂಕ್ ಗಳು ಸುಗಮ ಕಾರ್ಯನಿರ್ಹಣೆಗಾಗಿ ಸಹಕರಿಸಬೇಕೆಂದು ಜಿಲ್ಲಾಧಿಕಾರಿಗಳಾದ ಹರ್ಷಲ್ ಭೋಯರ್ ಅವರು ಕೋರಿದ್ದಾರೆ. ನಗದು ಕೊರತೆಯಿಂದ ಸಾರ್ವಜನಿಕರು, ವ್ಯಾಪಾರಿಗಳು, ರೈತರು ಹಾಗೂ ದಿನಗೂಲಿ ಕಾರ್ಮಿ ಕರು, ವಿಶೇಷವಾಗಿ ಪ್ರಸ್ತುತ ಕೃಷಿ ಗರಿಷ್ಠ ಹಂಗಾಮಿನಲ್ಲಿ ತೀವ್ರ ನಗದು ಹಣದ ತೊಂದರೆ ಅನುಭವಿ ಸುತ್ತಿದ್ದಾರೆ. ಯಾದಗಿರಿ ಜಿಲ್ಲೆ ಯದ್ಯಾಂತ ಕಾರ್ಯನಿರ್ವ ಹಿಸುತ್ತಿ ರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿ ಯಾ, ಕರ್ನಾಟಕ ಗ್ರಾಮೀಣ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಇಂಡಿ ಯಾ, ಬ್ಯಾಂಕ್ ಆಫ್ ಮಹಾರಾಷ್ಟ್ರ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಕೆನರಾ ಬ್ಯಾಂಕ್ ಹಾಗೂ ಇತರ ಸಾರ್ವಜನಿಕ ಮತ್ತು ಖಾಸಗಿ ವಲಯದ ಬ್ಯಾಂಕುಗಳಲ್ಲಿ ನಗದು ಲಭ್ಯತೆ ಕಡಿಮೆಯಾಗಿದೆ. ಈ ಬ್ಯಾಂಕು ಗಳು ನಿಯಮಿತವಾಗಿ ಎಸ್‌ಬಿಐ ಕರೆನ್ಸಿ ಚೆಸ್ಟ್ ಶಾಖೆ ಹಾಗೂ ಸಮೀಪದ ಬ್ಯಾಂಕ್ ಶಾಖೆಗಳ ಮೂಲಕ ನಗದು ಪೂರೈಕೆಗೆ ಪ್ರಯತ್ನಿಸುತ್ತಿವೆ. ಆದರೆ, ದಿನನಿತ್ಯದ ವ್ಯವಹಾರಗಳಿಗೆ ಮಾತ್ರ ಸಾಕಾಗುವಷ್ಟು ಸೀಮಿತ ನಗದು ಲಭ್ಯವಾಗುತ್ತಿದ್ದು, ಹೆಚ್ಚಿನ ಪ್ರಮಾಣದಲ್ಲಿ ಸಾರ್ವಜನಿಕರಿಗೆ ಹಣದ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ. ಹಣದ ಕೊರತೆಗೆ ಮುಖ್ಯ ಕಾರಣಗಳವೆಂದರೆ ಸರಕಾ ರದ ಯೋಜನೆಗಳ ಹಣ, ಕೊಯ್ಲು ಹಂಗಾಮು, ಹತ್ತಿ ಮಾರಾಟ. ಸಕ್ಕರೆ, ಕಬ್ಬು ಬಿಲ್ ಪಾವತಿ, ತೊಗರಿ (ತೂರ ದಾಲ್) ಬೆಳೆ ಹಣ ಪಾವತಿ ಬೆಳೆ ನಷ್ಟಕ್ಕೆ ಸಂಬಂಧಿಸಿದ ಸರ್ಕಾರದ ಪರಿಹಾರ ಮೊತ್ತಗಳು ರೈತರ ಖಾತೆಗಳಿಗೆ ಜಮೆಯಾಗಿರುವುದು ಮುಂತಾದವು ಗಳು ಸೇರಿವೆ. ಈ ಎಲ್ಲಾ ಕಾರಣಗ ಳಿಂದಾಗಿ ನಗದು ಹಿಂಪ ಡೆಯುವ ಪ್ರಮಾಣ ಹೆಚ್ಚಾಗಿದ್ದು, ಗ್ರಾಮೀಣ ಹಾಗೂ ನಗರ ಶಾಖೆಗಳಲ್ಲಿ ನಗದು ಪ್ರಮಾಣ ಕಡಿಮೆಯಾಗಿದೆ.



ನೇರ, ನಿಷ್ಟುರ ವಚನಕಾರ ಚೌಡಯ್ಯ : ಪಿ.ಎಚ್.ಪೂಜಾರ

ಬಾಗಲಕೋಟೆ,ಜ.22-

ಅಂಬಿಗರ ಚೌಡಯ್ಯನವರು ಒಬ್ಬ ನೇರ, ನಿಷ್ಟುರ, ಮಾಮಿಕ ವಚನಕಾರರಾಗಿದ್ದರು ಎಂದು ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಹೇಳಿದರು. ನವನಗರದ ಡಾ.ಬಿ. ಆರ್. ಅಂಬೇಡ್ಕರ ಭವನದಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಚೌಡಯ್ಯನವರು ನದಿ ದಾಟಿಸುವ ಅಂಬಿಗರಾಗಿರದೇ ಭವಸಾಗರ ದಾಟಿಸುವ ಅಂಬಿಗರಾಗಿದ್ದರು. ಇವರ ವಚನದಲ್ಲಿ ಕಟೂರತೆ ಇದ್ದರು ಮಾತ್ರ ಹೃದಯಿಯಾಗಿದ್ದರು ಎಂದರು.

ಚೌಡಯ್ಯನವರು ಪ್ರಥಮ ದಿನದಲ್ಲಿಯೆ ವಚನಾಂಕಿತ ಪಡೆದಿದ್ದರು. ಇವರು ತಮ್ಮ ವಚನಗಳ ಮೂಲಕ ಸಮಾಜದಲ್ಲಿ ಮೂಢ ನಂಬಿಕೆ, ಅನಿಷ್ಠ ಪದ್ದತಿಗಳನ್ನು ನೇರವಾಗಿ ಖಂಡಿಸಿದ್ದರು. ಇವರು ದಡ ಸೇರಿಸುವ ಕಾಯಕ ಮಾಡಿ ನಂಬಿಗಸ್ತರಾದವರು. ಆದರೆ ಕಾಯಕ ಜೀವಿಗಳಾದ ಮತ್ತು ಶೋಷಿತ ಸಮಾಜದವರಾಗಿದ್ದು, ತಮ್ಮ ಅಧಿಕಾರಾವಧಿ ವ್ಯಾಪ್ತಿಗೆ ಬರುವ ಸಹಾ ಯ, ಸಹಕಾರ ನೀಡುವುದಾಗಿ ತಿಳಿಸಿದರು.

ಉಪನ್ಯಾಸಕರಾಗಿ ಆಗಮಿಸಿದ್ದ ಮಲ್ಲಿಕಾರ್ಜುನ ಕಮತಗಿ ಮಾತನಾಡಿ ನರಸೀಪುರದಲ್ಲಿ ಉದ್ದಾಲಕ ಮುನಿಗಳ ಆಶ್ರಯದಲ್ಲಿ ಸಕಲ ವಿದ್ಯೆ ಪಡೆದ ಚೌಡಯ್ಯನವರು ಬರೆದ ವಚನ ಅವುಗಳಲ್ಲಿ ದೊರೆತ ವಚನಗಳು 719 ವಚನಗಳು. ಅವುಗಳಲ್ಲಿ ನೇರ, ನಿಷ್ಟುರ ಕಲ್ಯಾಣ ಸಂದೇಶಗಳಾಗಿದ್ದವು. ತುಂಗಭದ್ರಾ ನದಿಯ ದಡದಲ್ಲಿ ಅಂಬಿಗರ ವೃತ್ತಿ ಮಾಡುತ್ತಿದ್ದ ಇವರು ಕಲ್ಯಾಣಕ್ಕೆ ಬಂದು ಅನುಭವ ಮಂಟಪದಲ್ಲಿ ವಚನ ಮಂಡನೆ ಮಾಡುತ್ತಿ ರುವುದಾಗಿ ಬಸವಣ್ಣನವರು ಚೌಡಯ್ಯನವರನ್ನು ಕುರಿತು ಚೌಡಯ್ಯ ಶರಣರಾದವರಿಗೆ ಕಾಯಕ ಮುಖ್ಯ ಆದರೆ ಇಲ್ಲಿ ಇಲ್ಲಿ ತಾವು ಉಪಜೀವನ ಆಗುವುದು ಹೇಗೆ ಯಾಕೆಂದರೆ ಇಲ್ಲಿ ಯಾವುದು ಎಂದಾಗ ನಾನೊಬ್ಬ ನದಿ ದಾಟಿಸುವ ಅಂಬಿಗನಲ್ಲ ಭವಸಾಗ 'ರವನ್ನು ದಾಟಿಸುವ ಅಂಬಿಗನಾಗಿದ್ದೇನೆ ಎಂದರು. ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಅನೀಲ ಕುಮಾರ ದಡ್ಡಿ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ತಹಶೀಲ್ದಾರ ವಾಸುದೇವಸ್ವಾಮಿ ಸೇರಿದಂತೆ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

ಶ್ರೀ ಅಂಬಿಗರ ಚೌಡಯ್ಯ ಜಯಂತಿ ಆಚರಣೆ 12ನೇ ಶತಮಾನದಲ್ಲಿ ಶರಣರು ಸಮ ಸಮಾಜಕ್ಕಾಗಿ ಶ್ರಮಿಸಿದ್ದರು - ಶಾಸಕ ಕೆ.ರಾಘವೇಂದ್ರ ಹಿಟ್ನಾಳ

ಕೊಪ್ಪಳ,ಜ.22-

12ನೇ ಶತಮಾನದಲ್ಲಿ ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಅಂಬಿಗರ ಚೌಡಯ್ಯ ಆದಿಯಾಗಿ ಅಂದಿನ ಶರಣರು ಸಾಮಾಜಿಕ ಮೌಢ್ಯಗಳ ನಿರ್ಮೂಲನೆ ಮಾಡುವ ಮೂಲಕ ಸಮ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸಿದ್ದರು ಎಂದು ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಹೇಳಿದರು.

ಅವರು ಬುಧವಾರ ಕೊಪ್ಪಳ ನಗರದ ಸಾಹಿತ್ಯ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಶ್ರೀ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಅಂಬಿಗರ ಚೌಡಯ್ಯನವರು ತಮ್ಮ ಕಾಯಕದ ಮೂಲಕ ನಿಜ ಶರಣರಾಗಿದ್ದರು. ಅವರು ತಮ್ಮ ವಚನಗಳ ಮೂಲಕ ಸಮಾಜದ ಅಂಕು- ಡೊಂಕುಗಳನ್ನು ತಿದ್ದುವ ಕೆಲಸ ಮಾಡಿದ್ದರು. ಅವರ ಜಯಂತಿ ಆಚರಣೆ ಮಾಡಿದರೆ ಸಾಲದು ಅವರ ತತ್ವ ಮತ್ತು ಸಿದ್ಧಾಂತಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ. ಅವರ ಜೀವನ ಚರಿತ್ರೆ, ಯುವ ಪೀಳಿಗೆಗೆ ತಿಳಿಯಬೇಕೆಂಬ ಉದ್ದೇಶದಿಂದಲೇ ನಮ್ಮ ಸರಕಾರ ಅಂಬಿಗರ ಚೌಡಯ್ಯ ಜಯಂತಿಯನ್ನು ಸರಕಾರದ ವತಿಯಿಂದ ಆಚರಣೆ ಮಾಡುತ್ತಿದೆ ಎಂದರು.

ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸರಕಾರದ ಸೌಲಭ್ಯಗಳು ಸಿಗಬೇಕೆಂಬ ಉದ್ದೇಶದಿಂದ ಸಿದ್ರಾಮಯ್ಯ ಸಾಹೇಬರು ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದರು. ಇದರಿಂದ ರಾಜ್ಯದ ಲಕ್ಷ್ಯಾಂತರ ಬಡ ಜನರಿಗೆ ಅನುಕೂಲವಾಗಿದೆ. ಅಂಬೇಡ್ಕರ್ ಅವರು ನಮ್ಮ ದೇಶಕ್ಕೆ ಸಂವಿಧಾನ ಕೊಡದಿದ್ದರೆ ಇಂದು ನಾನು ಶಾಸಕನಾಗಿರುತ್ತಿರಲಿಲ್ಲ. ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕೆಟಗರಿಗಳು ಬಂದ ನಂತರ ನಮಗೆ ಸಮಾನ ಅವಕಾಶಗಳು ಸಿಕ್ಕವು. ಸಮಾಜದ ಅಭಿವೃದ್ಧಿಯ ವಿಷಯ ಬಂದಾಗ ನಾವೆಲ್ಲರೂ ಒಂದಾಗಬೇಕು. ನಾವು ಇದೇ ಜಾತಿಯಲ್ಲಿ ಹುಟ್ಟುತ್ತೇವೆ ಎಂದು ಯಾರು ಅರ್ಜಿ ಹಾಕಿ ಹುಟ್ಟಿಲ್ಲ. ಸಮಾಜದ ಪಟ್ಟಭದ್ರ ಹಿತಾಸಕ್ತಿಗಳು ಅದನ್ನು ಹುಟ್ಟು



ಹಾಕಿದ್ದಾರೆ. ನಾವು ಸಮಾಜದ ಮುಖ್ಯ ವಾಹಿನಿಗೆ ಬರಬೇಕಾದರೆ ಮೊದಲು ಶಿಕ್ಷಣ ಪಡೆಯಬೇಕು. ಅಂಬಿಗರ ಚೌಡಯ್ಯ ಸಮುದಾಯ ಭವನಕ್ಕೆ 2 ಕೋಟಿ ಕೊಡಬೇಕೆನ್ನುವ ಸಮಾಜದ ಮುಖಂಡರ ಬೇಡಿಕೆ ಇದ್ದು, ಈಗ 50 ಲಕ್ಷ ಕೊಡುವ ಕೆಲಸ ಮಾಡುತ್ತಿದ್ದೇನೆ. ಉಳಿದ ಹಣವನ್ನು ನೀಡಲಾಗುವುದು. ತಮಗೆಲ್ಲರಿಗೂ ಅಂಬಿಗರ ಚೌಡಯ್ಯ ಜಯಂತಿ ಶುಭಾಶಯಗಳು ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಅವರು ಮಾತನಾಡಿ, ಬಸವಣ್ಣನವರ ಅನುಭವ ಮಂಟಪದಲ್ಲಿ ಪ್ರಮುಖ ವಚನಕಾರರಾಗಿದ್ದ ಅಂಬಿಗರ ಚೌಡಯ್ಯನವರು ಕಾಯಕ, ವಚನ ಮತ್ತು ದಾಸೋಹವನ್ನು ತಮ್ಮ ಜೀವನದಲ್ಲಿ ನಡೆಸಿಕೊಂಡು ಬಂದಿದ್ದರು. ಅವರು ಎಲ್ಲರನ್ನೂ ಸಮಾನವಾಗಿ ತೆಗೆದುಕೊಂಡು ಹೋಗುವ ಕೆಲಸ ಮಾಡಿದ್ದರು. ಅವರ ವಚನಗಳು ಬಹಳ ಅರ್ಥಗರ್ಭಿತವಾಗಿವೆ. ಅವುಗಳನ್ನು ನಾವು ಓದಿ ತಿಳಿದುಕೊಳ್ಳಬೇಕು. ಸಮಾಜದಲ್ಲಿ ಸೌಲಭ್ಯಗಳನ್ನು ಪಡೆಯಬೇಕಾದರೆ ನಾವು ಮೊದಲು ಶಿಕ್ಷತರಾಗಬೇಕೆಂದು ಹೇಳಿದರು.

ಸರಕಾರಿ ಪದವಿಪೂರ್ವ ಕಾಲೇಜು ಭಾಗ್ಯನಗರ ಇತಿಹಾಸ ಪ್ರಾಧ್ಯಾಪಕ ರಾಜಕುಮಾರ ಡಿ.ಎಸ್. ಅವರು ಅಂಬಿಗರ ಚೌಡಯ್ಯನವರ ಕುರಿತು ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಅಂಬಿಗರ ಚೌಡಯ್ಯನವರು ತಮ್ಮ ಕಾಯಕ ನಿಷ್ಠೆಯ ಮೂಲಕ ಬಸವಣ್ಣನವರ ಪರಮ ಭಕ್ತರಾಗಿದ್ದರು. ಅವರು ಸರ್ವರ ಒಳಿತನ್ನೆ ಬಯಸಿದವರಾಗಿದ್ದರು. ಮಂಗಳೂರು ಮತ್ತು ಕಲಬುರಗಿ ವಿಶ್ವವಿದ್ಯಾಲಯಗಳಲ್ಲಿ ಅಂಬಿಗರ ಚೌಡಯ್ಯನವರ ಕುರಿತು ಅಧ್ಯಯನ ಪೀಠಗಳನ್ನೆ ತೆರೆಯಲಾಗಿದೆ. ಅವರ ವಚನಗಳು ಸಮಾಜದ ಗೊಡ್ಡು ಸಂಪ್ರದಾಯಗಳನ್ನು ಹೋಗಲಾಡಿಸುತ್ತವೆ ಎಂದು ಹೇಳಿದರು.

ಸಮಾಜದ ಮುಖಂಡರಾದ ರಾಜು ಕಲೆಗಾರ್ ಕಾರ್ಯಕ್ರಮದಲ್ಲಿ ಮಾತನಾಡಿದರು. ಜಯಂತಿ ಆಚರಣೆ ಪ್ರಯುಕ್ತ ಬುಧವಾರ ಬೆಳಿಗ್ಗೆ ಶ್ರೀ ಅಂಬಿಗರ ಚೌಡಯ್ಯ ಭಾವಚಿತ್ರದ ಮೆರವಣಿಗೆ ಕೊಪ್ಪಳ ನಗರದ ಶಿರಸಪ್ಪಯ್ಯನ ಮಠದಿಂದ ಗಡಿಯಾರ ಕಂಬದ ಮಾರ್ಗವಾಗಿ ಸಾಹಿತ್ಯ ಭವನದವರೆಗೆ ಅದ್ದೂರಿಯಾಗಿ ನಡೆಯಿತು.

ಕಾರ್ಯಕ್ರಮದಲ್ಲಿ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರಸನ್ನ ವಿ. ಗಡಾದ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಸಹಾಯಕ ಆಯುಕ್ತರಾದ ಮಹೇಶ ಮಾಲಗಿತ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣಕುಮಾರ, ಸಮಾಜದ ಮುಖಂಡರಾದ ಹುಲುಗಪ್ಪ ಭಾರಕೇರ್, ರಾಜು ಕಲೆಗಾರ್, ವಿರೂಪಾಕ್ಷ ಭಾರಕೇರ್, ಈರಪ್ಪ ಕರಿಗಾರ್, ರಮೇಶಪ್ಪ ಕಬ್ಬೇರ್, ಹುಲುಗಪ್ಪ ನರೇಗಲ್, ಶಿವಪ್ಪ ಕಬ್ಬೇರ್, ಉದಯ ಕಬ್ಬೇರ್, ಹನುಮಂತಪ್ಪ ಗಿಡ್ಡಾರಿ, ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಹನುಮಂತಪ್ಪ ಎಲಿಗಾರ ಸೇರಿದಂತೆ ಸಮಾಜದ ಯುವಕರು ಹಾಗೂ ಮುಖಂಡರು ಉಪಸ್ಥಿತರಿದ್ದರು.

ಜನ್ಮಸ್ಥಳ ಪಿಕಳಿಹಾಳ ಗ್ರಾಮದಲ್ಲಿ ಅಯ್ಯಪ್ಪ ಸ್ವಾಮಿಯ ಗಾನ ಸುಧೆ

ಲಿಂಗಸುಗೂರ ತಾಲೂಕಿನ ಪಿಕಳಿಹಾಳ ಗ್ರಾಮದಲ್ಲಿ ಲಿಂ. ಪೂಜ್ಯಶ್ರೀ ಮರಿಬಸವರಾಜೇಶ್ವರ ದೇಶೀಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ 31ನೇ ವರ್ಷದ ಜಾತ್ರಾ ಹಾಗೂ ಉಚ್ಚಾಯ ಮಹೋತ್ಸವದ ಪ್ರಯುಕ್ತವಾಗಿ ತಡಕಲ್ ಹಿರೇಮಠದ ವೇ.ಮೂ. ಶಿವಕುಮಾರ ಶಾಸ್ತ್ರಿಗಳವರ ಅಮೃತವಾಣಿಯಲ್ಲಿ 4ನೇ ದಿನದ ಶರಣ ಚರಿತಾಮೃತ ಆಧ್ಯಾತ್ಮಿಕ ಪ್ರವಚನವು ಅದ್ದೂರಿಯಾಗಿ ಜರುಗಿತು.

ಪ್ರಾರಂಭದಲ್ಲಿ ಗ್ರಾಮದ ವಿದ್ಯಾರ್ಥಿನಿಯರಿಂದ ಪ್ರಾರ್ಥನಾ ಗೀತೆ ಹಾಗೂ ಶಶಿಧರ ಸ್ವಾಮಿ ಗವಾಯಿಗಳು ವಂದಾಲಿಯವರು ಪುರಾಣ ಪ್ರಾರಂಭದ ಗೀತೆಯನ್ನು



ಪ್ರಸ್ತುತ ಪಡಿಸಿದರು ಇವರಿಗೆ ಎಸ್. ಬಸವರಾಜ ವಿಶ್ವಕರ್ಮರವರು ತಬಲಾ ಸಾಥ ನೀಡಿದರು.

ಇದೇ ಸಂದರ್ಭದಲ್ಲಿ ತುಮಕೂರಿನ ತ್ರೀವಿಧ ದಾಸೋಹಿ ಡಾ. ಶಿವಕುಮಾರ ಮಹಾಸ್ವಾಮಿಗಳವರ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು.

ನಂತರ ಛಾಯಾಗ್ರಾಹಕರು, ವರದಿಗಾರರಾದ ಹಾಗೂ ಗಾಯಕ ಕಲಾವಿದರಾದ ಪಿಕಳಿಹಾಳ ಅಯ್ಯಪ್ಪ ಸ್ವಾಮಿ ಹಿರೇಮಠರವರು ಭಕ್ತಿಗೀತೆಯನ್ನು ಪ್ರಸ್ತುತ ಪಡಿಸಿ ನೆರೆದ ಸಾರ್ವಜನಿಕರನ್ನು ಸಂಗೀತ ಮಂತ್ರಮುಗ್ದರನ್ನಾಗಿಸಿ ಅವರಿಂದ ಮೆಚ್ಚುಗೆ ಪಡೆದರು, ಇವರಿಗೆ ವಾದ್ಯಸಾಥಿಯಾಗಿ ಶಶಿಧರ ಸ್ವಾಮಿ ಹಿರೇಮಠ ಮತ್ತು ಬಸರಾಜ ಎಸ್. ವಿಶ್ವಕರ್ಮರವರು ನೀಡಿದರು.

ನಂತರ ನೂರಾರು ಸಾರ್ವಜನಿಕರು ಪ್ರಸಾದವನ್ನು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಜಾತ್ರಾ ಮಹೋತ್ಸವದ ಸೇವಾ ಸಮಿತಿಯ ಸರ್ವ ಪದಾಧಿಕಾರಿಗಳು ಪಿಕಳಿಹಾಳ ಗ್ರಾಮದ ಗುರು ಹಿರಿಯರು, ಸುತ್ತಮುತ್ತಲ ಗ್ರಾಮಗಳ ಸರ್ವ ಸದ್ಭಕ್ತರು, ಜನಪ್ರತಿನಿಧಿಗಳು, ಮಹಿಳೆಯರು, ಯುವಕ ಯುವತಿಯರು ಮಕ್ಕಳು ಉಪಸ್ಥಿತರಿದ್ದರು.

ರಂಗೋಲಿ ಸ್ಪರ್ಧೆಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆ ಭಾಗವಹಿಸಲು ಆಹ್ವಾನ

ಯಾದಗಿರಿ ,ಜ.22-

2025-26ನೇ ಸಾಲಿನ ಗಣರಾಜ್ಯೋತ್ಸವದ ನಿಮಿತ್ಯ ಏರ್ಪಡಿಸಿರುವ ರಂಗೋಲಿ ಸ್ಪರ್ಧೆಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆ ಭಾಗವಹಿಸಲು ಆಹ್ವಾನಿಸಲಾಗಿದೆ ಎಂದು ಯಾದಗಿರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಉಪ ನಿರ್ದೇಶಕರು ತಿಪ್ಪಣ್ಣ ಸಿರಸಗಿ ಅವರು ತಿಳಿಸಿದ್ದಾರೆ.

ನಿಮ್ಮೂರು ಸುದ್ದಿ

ಸಂಪಾದಕೀಯ

ರಾಜ್ಯಪಾಲರು ಕೇಂದ್ರದ ಕೈಗೊಂಬೆಯಲ್ಲ- ಆಯಾ ರಾಜ್ಯದ ಜನಾದೇಶ ಧಿಕ್ಕರಿಸುವ ನಡೆ ಸಂವಿಧಾನ ಬಾಹಿರ

ರಾಜ್ಯಪಾಲರು ಮತ್ತು ರಾಷ್ಟ್ರಪತಿಯವರು ವಿಧಾನಮಂಡಲ ಮತ್ತು ಸಂಸತ್ತಿನ ಜಂಟಿ ಅಧಿವೇಶನಗಳನ್ನು ಉದ್ದೇಶಿಸಿ ಮಾಡುವ ಭಾಷಣಗಳನ್ನು ರಾಜ್ಯಪಾಲರು ಅಥವಾ ರಾಷ್ಟ್ರಪತಿಯವರು ಬರೆದಿರುವುದಿಲ್ಲ. ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಬರೆದ ಭಾಷಣಗಳನ್ನು ಓದುತ್ತಾರೆ. ಇದು ಅನೂಚಾನವಾಗಿ ನಡೆದುಕೊಂಡ ಬಂದ ಸಂವಿಧಾನಾತ್ಮಕ ಕರ್ತವ್ಯ. ಈವರೆಗಿನ ರಾಜ್ಯಪಾಲರು- ರಾಷ್ಟ್ರಪತಿಯವರು ಈ ಸಂವಿಧಾನಾತ್ಮಕ ಪರಂಪರೆಯನ್ನು ಮೀರದೆ ಅನುಸರಿಸಿಕೊಂಡು ಬಂದಿದ್ದಾರೆ. ರಾಜ್ಯ ಸರ್ಕಾರ ತಯಾರು ಮಾಡಿಕೊಟ್ಟ ಭಾಷಣವನ್ನು ಜಂಟಿ ಅಧಿವೇಶನದಲ್ಲಿ ಓದುವುದು ರಾಜ್ಯಪಾಲರ ಕರ್ತವ್ಯ ಎಂದು ಸಂವಿಧಾನದ 176(1) ಅನುಚ್ಛೇದ ಸಾರುತ್ತದೆ.

ರಾಜ್ಯಪಾಲರುಗಳ ಅಸಹನೆ ಅಸಹಕಾರ ವಿಶೇಷವಾಗಿ ಪ್ರತಿಪಕ್ಷಗಳ ಸರ್ಕಾರಗಳಿಗೆ ಮೀಸಲು. ಪ್ರತಿಪಕ್ಷಗಳ ಸರ್ಕಾರಗಳಿಗೆ ಅಡ್ಡಿ ಆತಂಕಗಳನ್ನು ಒಡ್ಡುವುದು ಕೇಂದ್ರ ಬಿಜೆಪಿ ಸರ್ಕಾರ ನೇಮಕ ಮಾಡಿದ ರಾಜ್ಯಪಾಲರ ನೇರ ಕಾರ್ಯಸೂಚಿಯೇ ಆಗಿಬಿಟ್ಟಿದೆ.

ತಮಿಳುನಾಡಿನ ರಾಜ್ಯಪಾಲ ಆರ್.ಎನ್.ರವಿ ತೀವ್ರ ವಿವಾದಿತ ವ್ಯಕ್ತಿ. ಕಳೆದ ಮೂರು ವರ್ಷಗಳ ತಮ್ಮ ಅಧಿಕಾರ ಅವಧಿಯಲ್ಲಿ ರಾಜ್ಯಪಾಲ ಪದವಿ ಶ್ರೇಷ್ಠ, ಚುನಾಯಿತ ರಾಜ್ಯ ಸರ್ಕಾರ ಕನಿಷ್ಠ ಎಂಬಂತೆ ನಡೆದುಕೊಂಡು ಬಂದಿದ್ದಾರೆ. ಕಳೆದ ತಿಂಗಳು ಅವರು ವಿಧಾನಸಭೆಯಿಂದ ಸತತ ನಾಲ್ಕನೆಯ ಸಲ ವಾಕೌಟ್ ಮಾಡಿದ್ದಾರೆ. ಇದೇನೂ ಹೆಮ್ಮೆ ಪಡುವ ವಿಷಯ ಅಲ್ಲ.

ಇತ್ತೀಚಿನ ತನಕ ಕೇರಳದ ಎಡಪಂಥೀಯ ಸರ್ಕಾರವನ್ನು ಮಗ್ಗುಲ ಮುಳ್ಳಿನಂತೆ ಕಾಡಿದ ರಾಜ್ಯಪಾಲ ಆರಿಫ್ ಮಹಮ್ಮದ್ ಖಾನ್ ಕೂಡ ಆರ್.ಎನ್.ರವಿ ಅವರದೇ ಪ್ರವೃತ್ತಿ ಹೊಂದಿದ್ದರು. ಕೇರಳ ಸರ್ಕಾರವೂ ಅವರ ವಿರುದ್ಧ ಸುಪ್ರೀಮ್ ಕೋರ್ಟ್ ಕದ ಬಡಿದಿತ್ತು.

ಬಿಜೆಪಿ ಸರ್ಕಾರ ನೇಮಕ ಮಾಡಿದ ರಾಜ್ಯಪಾಲರೇ ಅಲ್ಲಿಯೂ ಮೋಶಾ ಕಾರ್ಯಸೂಚಿಯ ಜಾರಿಗಾಗಿ ಸಮಯ ಕಾಯುತ್ತಿರುತ್ತಲೇ ಇರುತ್ತಾರೆ. ಆರಿಫ್ ಮೊಹಮ್ಮದ್ ಖಾನ್ ಅವರ ಜಾಗಕ್ಕೆ ಬಂದಿರುವ ರಾಜೇಂದ್ರ ಅರ್ಲೇಕರ್ ಕೂಡ ಕೇರಳದ ವಾಮರಂಗ ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ಇಡಿಯಾಗಿ ಓದಿಲ್ಲ. ಕೇಂದ್ರ ಸರ್ಕಾರದ ವಿರುದ್ಧದ ಭಾಗಗಳನ್ನು ಓದದೆ ಕೈಬಿಟ್ಟಿದ್ದಾರೆ.

ರಾಷ್ಟ್ರಪತಿ ಕೂಡ ವರ್ಷಕ್ಕೊಮ್ಮೆ ಸಂಸತ್ತಿನ ಉಭಯ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡುತ್ತಾರೆ. ಈ ಭಾಷಣವನ್ನು ಕೇಂದ್ರ ಸರ್ಕಾರವೇ ಸಿದ್ಧಪಡಿಸಿ ನೀಡುತ್ತದೆ. ರಾಷ್ಟ್ರಪತಿಯವರು ಅದನ್ನು ಚಾಚೂ ತಪ್ಪದೆ ಓದುತ್ತಾರೆ. ಇಂತಹ ಭಾಷಣದಲ್ಲಿ ಪ್ರತಿಪಕ್ಷಗಳನ್ನು ಕಟುವಾಗಿ ಟೀಕಿಸುವ, ನಿಂದಿಸುವ ಅಂಶಗಳೂ ಇರುತ್ತವೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಈ ಭಾಷಣವನ್ನು ಇಡಿಯಾಗಿ ಓದುವುದು ಬೆಳೆದು ಬಂದಿರುವ ಶಿಷ್ಟಾಚಾರ. ಮುರ್ಮು ಅವರನ್ನು ಬಿಜೆಪಿ ನೇತೃತ್ವದ ಮೋಶಾ ಸರ್ಕಾರವೇ ಆರಿಸಿರುವುದು ಹೌದು. ಒಂದು ವೇಳೆ ಮುರ್ಮು ಜಾಗದಲ್ಲಿ ಪ್ರತಿಪಕ್ಷಗಳು ಆಯ್ಕೆ ಮಾಡಿದ ರಾಷ್ಟ್ರಪತಿಯವರು ಇದ್ದಿದ್ದ ಸಂದರ್ಭದಲ್ಲಿ ಕೂಡ ಮೋಶಾ ಸರ್ಕಾರ ಸಿದ್ಧಪಡಿಸಿದ ಭಾಷಣವನ್ನೇ ಓದಲೇಬೇಕಿತ್ತು.

ತಮಿಳುನಾಡಿನ ರಾಜ್ಯಪಾಲ ರವಿ ಅವರು ಮೂರು ವರ್ಷಗಳಿಂದ ಅವರು ವಾಕೌಟ್ ಮಾಡಿದ್ದಕ್ಕೆ ನೀಡಿರುವ ಸಮರ್ಥನೆ- ಅಧಿವೇಶನದ ಆರಂಭದಲ್ಲಿ ತಮಿಳ್ ತಾಯ್ ವಾಳತ್ತು ಎಂಬ ತಮಿಳುನಾಡಿನ ನಾಡಗೀತೆಯನ್ನು ನುಡಿಸಲಾಯಿತು. ರಾಷ್ಟ್ರಗೀತೆಯನ್ನು ಮುಕ್ತಾಯದ ಹಂತಕ್ಕೆ ತಳ್ಳಲಾಯಿತು. 2024 ಮತ್ತು 2025ರ ಅಧಿವೇಶನಗಳಲ್ಲಿ ಈ ಕಾರಣ ನೀಡಿಯೇ ಸಭಾತ್ಯಾಗ ಮಾಡಿದ್ದರು.

ಬಾಳ್ ಕನ್ನಡ ತಾಯ್, ಏಳ್ ಕನ್ನಡ ತಾಯ್, ಆಳ್ ಕನ್ನಡ ತಾಯ್ । ಕನ್ನಡಿಗರೊಡತಿ ಓ ರಾಜೇಶ್ವರೀ ಎಂಬ ಕುವೆಂಪು ಕವಿತೆಯ ಮಾದರಿಯದು ತಮಿಳ್ ತಾಯ್ ವಾಳತ್ತು ನಾಡಗೀತೆ. ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ. ಎಂಬ ನಾಡಗೀತೆಯನ್ನು ಗುರುವಾರ ಆರಂಭ ಆಗುವ ಕರ್ನಾಟಕ ವಿಧಾನಮಂಡಲ ಅಧಿವೇಶನದ ಆರಂಭದಲ್ಲಿ ನುಡಿಸಿದರೆ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಪ್ರತಿಭಟಿಸಿ ಹೊರನಡೆಯುವರೇ? ಹಾಗೊಮ್ಮೆ ಹೊರನಡೆದರೆ ಅಂತಹ ನಡೆಯನ್ನು ಕನ್ನಡಿಗರಾದರೂ ಒಪ್ಪುವರೇ?

ಬುಧವಾರ ತಡ ಸಂಜೆಯ ಹೊತ್ತಿಗೆ ತಮಿಳುನಾಡು- ಕೇರಳದ ಮತ್ತೊಂದು ಬಗೆಯ ಪುನರಾವರ್ತನೆ ಕರ್ನಾಟಕದಲ್ಲೂ ನಡೆದಿದೆ. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ರಾಜ್ಯ ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ನಾಳೆಯಿಂದ ಆರಂಭ ಆಗುವ ಜಂಟಿ ಅಧಿವೇಶನದಲ್ಲಿ ಇಡಿಯಾಗಿ ಓದುವುದಿಲ್ಲ ಎಂದು ಹಠ ಹಿಡಿದಿದ್ದಾರೆ. ಮನರೇಗ ಯೋಜನೆಯನ್ನು ಅಸಲು ರೂಪದಲ್ಲಿ ಉಳಿಸಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕರೆದಿರುವ ವಿಶೇಷ ಅಧಿವೇಶನವಿದು. ಗ್ರಾಮೀಣ ಬಡವರ ಪರವಿದ್ದ ಮನರೇಗ ಯೋಜನೆಯ ರೂಪ ಮತ್ತು ಸಾರವನ್ನು ಜಜ್ಜಿ ವಿಕೃತಗೊಳಿಸಿ ವಿಬಿ ಜಿ ರಾಮ್ ಜಿ ಎಂಬ ಹೊಸ ಹೆಸರಿನಿಂದ ಕರೆದಿದೆ ಮೋದಿ ಸರ್ಕಾರ. ರಾಜ್ಯಪಾಲರು ರಾಷ್ಟ್ರಪತಿಯವರ ಪ್ರತಿನಿಧಿಯೇ ವಿನಾ ಕೇಂದ್ರ ಸರ್ಕಾರ ಏಜೆಂಟರಲ್ಲ. ಮೋದಿ ಸರ್ಕಾರ ಮನರೇಗ ಯೋಜನೆಯನ್ನು ತಿರಸ್ಕರಿಸಿದರೆ ಅದರ ಅರ್ಥ ರಾಜ್ಯಪಾಲರು ಅದೇ ಹಾದಿಯನ್ನು ತುಳಿಯುವುದು ಸಂವಿಧಾನಾತ್ಮಕ ನಡವಳಿಕೆ ಅಲ್ಲ. ಮನರೇಗ ಯೋಜನೆಯನ್ನು ಬಡವರ ವಿರುದ್ಧ ವಿಕೃತಗೊಳಿಸಿರುವ ನಡೆಯನ್ನು ವಿರೋಧಿಸಲೆಂದೇ ಕರೆದಿರುವ ಅಧಿವೇಶನವಿದು. ಕೇಂದ್ರ ಸರ್ಕಾರದ ವಿರುದ್ಧವಿರುವ ಸಾಲುಗಳನ್ನು ಪ್ಯಾರಾಗಳನ್ನು ಬಿಟ್ಟು ಉಳಿದ ಭಾಗವನ್ನು ಓದುವುದಾಗಿಯೂ ಇಲ್ಲದೆ ಹೋದರೆ ಓದುವುದೇ ಇಲ್ಲ ಎಂಬುದಾಗಿಯೂ ರಾಜ್ಯಪಾಲ ಥಾವರ್ ಚಂದ್ ತಳೆದಿರುವ ನಿಲುವು ಸಂವಿಧಾನಬಾಹಿರ. ತಮ್ಮ ಕರ್ತವ್ಯವನ್ನು ನಿರ್ವಹಿಸಲು ಅಸಮರ್ಥರು ಎಂದಾದರೆ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವದೇ ಲೇಸು.

2023ರಿಂದ ಇಲ್ಲಿಯ ತನಕ ರಾಜ್ಯಪಾಲರ ಭಾಷಣದಲ್ಲಿದ್ದ ಪೆರಿಯಾರ್ (ತಮಿಳುನಾಡಿನ ಕ್ರಾಂತಿಕಾರಿ ಸಮಾಜಸುಧಾರಕ ಇವಿ ರಾಮಸ್ವಾಮಿ ನಾಯ್ಕರ್), ಅಣ್ಣಾ (ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಸಿ.ಎನ್.ಅಣ್ಣಾದುರೈ), ಬಿ.ಆರ್.ಅಂಬೇಡ್ಕರ್ ಹಾಗೂ ಕಲೈಂಗರ್ (ಮಾಜಿ ಮುಖ್ಯಮಂತ್ರಿ ಎಂ.ಕರುಣಾನಿಧಿ) ಅವರ ಹೆಸರುಗಳನ್ನು ಓದಲು ತಮಿಳುನಾಡಿನ ರಾಜ್ಯಪಾಲ ರವಿ ಅವರು ನಿರಾಕರಿಸಿದ್ದರು. ನೀತಿಗಳೂ ಇರಲಿಲ್ಲ, ಕಾರ್ಯಕ್ರಮಗಳೂ ಆಗಿರಲಿಲ್ಲ. ಕೇವಲ ಪ್ರಾಪಗ್ಯಾಂಡ ಆಗಿತ್ತು. ಸುಳ್ಳುಗಳಿಂದ ತುಂಬಿತ್ತು ಎಂದು ಪತ್ರಿಕೆಗಳಿಗೆ ನೆಪ ಹೇಳಿದ್ದರು. ನೆನ್ನೆಯೂ ಇದೇ ನೆಪಗಳನ್ನು ಒಡ್ಡಿದ್ದಾರೆ.

ನಾಡಗೀತೆಯನ್ನು ಆರಂಭದಲ್ಲಿ ಹಾಡಿ, ಮುಕ್ತಾಯದ ಹಂತದಲ್ಲಿ ರಾಷ್ಟ್ರಗೀತೆಯನ್ನು ಹಾಡುವ ಪರಂಪರೆಯನ್ನು ತಮಿಳುನಾಡು ಸದನದ್ದು. ನಾಡಗೀತೆಯನ್ನು ಆರಂಭದಲ್ಲೇ ಹಾಡಿದ್ದು ರಾಜ್ಯಪಾಲ ರವಿ ಪಾಲಿನ ಅಸಲಿ ಸಮಸ್ಯೆ. ಹಾಗಿದ್ದರೆ ರಾಷ್ಟ್ರಗೀತಗೆ ಮುನ್ನ ನಮಸ್ತೇ ಸದಾ ವತ್ಸ ಲೇ ಮಾತೃಭೂಮೇ ಎಂಬ ಆರೆಸ್ಸೆಸ್ ಪ್ರಾರ್ಥನೆಯನ್ನು ರಾಷ್ಟ್ರಗೀತೆಗೆ ಮುನ್ನ ಹಾಡಿದರೆ ಅಂತಹ ಸಭೆಗಳಿಂದಲೂ ರಾಜ್ಯಪಾಲ ರವಿ ಹೊರನಡೆಯುತ್ತಾರೆಯೇ ಎಂದು ಸುಪ್ರೀಮ್ ಕೋರ್ಟಿನ ಹಿರಿಯ ನ್ಯಾಯವಾದಿ ಸಂಜಯ ಹೆಗಡೆ ಪ್ರಶ್ನಿಸಿದ್ದರು.

ರಾಜ್ಯಪಾಲ ರವಿ ಅವರು ತಮಿಳುನಾಡು ವಿಧಾನಸಭೆ ರಾಜ್ಯದ ಆಗು ಹೋಗುಗಳಿಗೆ ಸಂಬಂಧಿಸಿದಂತೆ ಅಂಗೀಕರಿಸಿದ ಸಾಲು ಸಾಲು ವಿಧೇಯಕಗಳಿಗೆ ವರ್ಷಗಟ್ಟಲೆ ಅಂಗೀಕಾರ ನೀಡದೆ ಬಾಕಿ ಇರಿಸಿಕೊಂಡು ರಾಷ್ಟ್ರಪತಿಯವರಿಗೆ ಕಳಿಸಿದ್ದರು. ಈ ಸಂಬಂಧದಲ್ಲಿ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ತಕರಾರು ಅರ್ಜಿಯ ವಿಚಾರಣೆ ಸಂದರ್ಭದಲ್ಲಿ, ರವಿಯವರ ಈ ವರ್ತನೆಯನ್ನು ಸುಪ್ರೀಮ್ ಕೋರ್ಟು ತೀವ್ರ ತರಾಟೆಗೆ ತೆಗೆದುಕೊಂಡಿತ್ತು. ಸಂವಿಧಾನಬಾಹಿರ ನಡೆಯಲ್ಲವೇ ಎಂದು ಪ್ರಶ್ನಿಸಿತ್ತು.

ಕೇಂದ್ರ ಸರ್ಕಾರದ ನಿಲುವಿಗೆ ಅಥವಾ ಕಾಯಿದೆ ಕಾನೂನುಗಳಿಗೆ ಹೋಲಿಸಿ ಸಮಂಜಸವಾಗಿಲ್ಲ ಎಂದು ಈ ವಿಧೇಯಕಗಳನ್ನು ಬಾಕಿ ಇಟ್ಟುಕೊಳ್ಳುವುದು ಸಲ್ಲದು ಎಂದಿತ್ತು. ವಿಧಾನಸಭೆ ಎರಡನೆಯ ಸಲ ಅಂಗೀಕರಿಸಿ ಕಳಿಸಿದ ವಿಧೇಯಕಗಳಿಗೆ ಅಂಕಿತ ಹಾಕುವುದು ಸಂವಿಧಾನದ 200ನೆಯ ಕಲಮಿನ ಪ್ರಕಾರ ಕಡ್ಡಾಯ ಕರ್ತವ್ಯ. ಈ ಕರ್ತವ್ಯವನ್ನು ನೀವು ಉಲ್ಲಂಘಿಸಿದ್ದಾರೂ ಹೇಗೆ ಪ್ರಶ್ನೆಯನ್ನು ಕೇಳಿತ್ತು.

ರಾಜ್ಯಪಾಲರು ಮತ್ತು ರಾಷ್ಟ್ರಪತಿಯವರು ವಿಧಾನಮಂಡಲ ಮತ್ತು ಸಂಸತ್ತಿನ ಜಂಟಿ ಅಧಿವೇಶನಗಳನ್ನು ಉದ್ದೇಶಿಸಿ ಮಾಡುವ ಭಾಷಣಗಳನ್ನು ರಾಜ್ಯಪಾಲರು ಅಥವಾ ರಾಷ್ಟ್ರಪತಿಯವರು ಬರೆದಿರುವುದಿಲ್ಲ. ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಬರೆದ ಭಾಷಣಗಳನ್ನು ಓದುತ್ತಾರೆ. ಅನೂಚಾನವಾಗಿ ನಡೆದುಕೊಂಡ ಬಂದ ಸಂವಿಧಾನತ್ಮಕ ಕರ್ತವ್ಯ. ಈವರೆಗಿನ ರಾಜ್ಯಪಾಲರು ರಾಷ್ಟ್ರಪತಿಯವರು ಈ ಸಂವಿಧಾನಾತ್ಮಕ ಪರಂಪರೆಯನ್ನು ಮೀರದೆ ಅನುಸರಿಸಿಕೊಂಡು ಬಂದಿದ್ದಾರೆ. ಕೆ.ಆರ್. ನಾರಾಯಣನ್ ರಾಷ್ಟ್ರಪತಿಯಾಗಿದ್ದ ಕೆಲ ವರ್ಷಗಳಲ್ಲಿ ಕೇಂದ್ರದಲ್ಲಿ ವಾಜಪೇಯಿ ಅವರ ಸರ್ಕಾರವಿತ್ತು. ಪ್ರಣಬ್ ಮುಖರ್ಜಿ ರಾಷ್ಟ್ರಪತಿಯಾಗಿದ್ದ ಕೆಲ ವರ್ಷಗಳ ಕಾಲ ಮೋದಿ ಸರ್ಕಾರವಿತ್ತು. ಈಗಲೂ ಅವರದೇ ಸರ್ಕಾರವಿದೆ. ವಾಜಪೇಯಿ ಸರ್ಕಾರ ಮತ್ತು ಮೋದಿ ಸರ್ಕಾರಗಳು ಬರೆದಿದ್ದ ಭಾಷಣಗಳನ್ನು ಕಾಂಗ್ರೆಸ್ ಹಿನ್ನೆಲೆಯವರಾದರೂ ಓದಿದರು. ಸಂವಿಧಾನಾತ್ಮಕ ಕರ್ತವ್ಯವನ್ನು ಎತ್ತಿ ಹಿಡಿಯಲಿಲ್ಲವೇ? ರಾಜ್ಯ ಸರ್ಕಾರ ತಯಾರು ಮಾಡಿಕೊಟ್ಟ ಭಾಷಣವನ್ನು ಜಂಟಿ ಅಧಿವೇಶನದಲ್ಲಿ ಓದುವುದು ರಾಜ್ಯಪಾಲರ ಕರ್ತವ್ಯ ಎಂದು ಸಂವಿಧಾನದ 176(1) ಅನುಚ್ಛೇದ ಸಾರುತ್ತದೆ.

''ನೀವು ಬೆಂಕಿಯೊಂದಿಗೆ ಸರಸವಾಡುತ್ತಿದ್ದೀರಿ'' ಎಂದು ಸುಪ್ರೀಮ್ ಕೋರ್ಟು ವರ್ಷದ ಹಿಂದೆ ಪಂಜಾಬಿನ ರಾಜ್ಯಪಾಲರಿಗೆ ಚಾಟಿ ಬೀಸಿದ್ದ ಬೆಳವಣಿಗೆ ದೊಡ್ಡ ಅಲೆಗಳನ್ನು ಎಬ್ಬಿಸಬೇಕಿತ್ತು. ಚುನಾಯಿತ ರಾಜ್ಯ ಸರ್ಕಾರಗಳನ್ನು ಕೆಡವುವ ರಾಜಕಾರಣದಲ್ಲಿ ರಾಜ್ಯಪಾಲರು ಸಕ್ರಿಯವಾಗಿ ಭಾಗಿಗಳಾಗುತ್ತಿದ್ದಾರೆಂದು ಸುಪ್ರೀಮ್ ಕೋರ್ಟು ಕಳವಳ ವ್ಯಕ್ತಪಡಿಸಿತ್ತು. ರಾಜ್ಯಪಾಲರ ಪಕ್ಷಪಾತ, ಪೂರ್ವಗ್ರಹದ ನಡೆಗಳ ಕುರಿತು ಸರ್ವೋಚ್ಚ ನ್ಯಾಯಾಲಯ ಬಿರುನುಡಿಗಳನ್ನು ಬಹುಕಾಲದಿಂದ ಆಡುತ್ತ ಬಂದಿದೆ.

ತಮಿಳುನಾಡು, ಕೇರಳ, ತೆಲಂಗಾಣ, ಪಶ್ಚಿಮ ಬಂಗಾಳ ಹೀಗೆ ಹಲವು ರಾಜ್ಯಗಳು ರಾಜ್ಯಪಾಲರು ಪಕ್ಷ ರಾಜಕಾರಣದಲ್ಲಿ ತೊಡಗಿದ್ದಾರೆಂದು ಆರೋಪಿಸಿ ಸುಪ್ರೀಮ್ ಕೋರ್ಟ್ ಕದ ಬಡಿದಿವೆ. ಸಂವಿಧಾನದ ಆಡಿಪಾಯವನ್ನೇ ಅಲುಗಿಸುವ ಕೃತ್ಯಗಳಲ್ಲಿ ರಾಜ್ಯಪಾಲರು ತೊಡಗಿದ್ದಾರೆಂಬ ಆರೋಪ ಕಳೆದ ಏಳೆಂಟು ವರ್ಷಗಳಲ್ಲಿ ಅತ್ಯಧಿಕವಾಗಿ ಕೇಳಿಬರುತ್ತಿದೆ.

ರಾಜ್ಯಪಾಲರಾಗಿ ನೇಮಕಗೊಳ್ಳುವ ಮುನ್ನ ಆ ವ್ಯಕ್ತಿ ಯಾವುದೇ ಪಕ್ಷದ ಸದಸ್ಯನಾಗಿರಬಹುದು, ಭಿನ್ನ ಸೈದ್ಧಾಂತಿಕ ಚಿಂತನೆಯ ಶಾಲೆಗೆ ಸೇರಿದಾತನೇ ಇರಬಹುದು. ಆದರೆ ಒಮ್ಮೆ ರಾಜ್ಯಪಾಲ ಹುದ್ದೆಗೆ ನೇಮಕ ಹೊಂದಿದ ನಂತರ ಸ್ವತಂತ್ರವಾಗಿ ಮತ್ತು ನಿಷ್ಪಕ್ಷಪಾತವಾಗಿ ಕೆಲಸ ಮಾಡಬೇಕು. ಆದರೆ ಇಂದಿನ ಬಹುತೇಕ ರಾಜ್ಯಪಾಲರು ರಾಜ್ಯದ ಹಿತಕ್ಕಿಂತ ತಮ್ಮನ್ನು ನೇಮಕ ಮಾಡಿದ ರಾಜಕೀಯ ಪಕ್ಷದ ಹಿತವನ್ನೇ ಕಾಯುತ್ತಿದ್ದಾರೆ.

ರಾಜ್ಯಪಾಲರು ರಬ್ಬರ್ ಸ್ಟ್ಯಾಂಪುಗಳಲ್ಲ, ಆದರೆ ಅವರು ರಾಜ್ಯ ಸರ್ಕಾರಗಳ ತಲೆಯ ಮೇಲೆ ಕುಳಿತುಕೊಂಡು ಕಾರುಬಾರು ನಡೆಸುವ ಸೂಪರ್ ಸರ್ಕಾರಗಳೂ ಅಲ್ಲ. ರಾಜ್ಯಪಾಲರು ರಾಜ್ಯಗಳಲ್ಲಿ ರಾಷ್ಟ್ರಪತಿಯವರ ಪ್ರತಿನಿಧಿಗಳೇ ವಿನಾ ಕೇಂದ್ರ ಸರ್ಕಾರದ ರಾಜಕೀಯ ಏಜೆಂಟರಲ್ಲ.

ಸಂವಿಧಾನದ ಪ್ರಕಾರ ಚುನಾಯಿತ ವಿಧಾನಸಭೆ ಮತ್ತು ಸರ್ಕಾರಗಳಲ್ಲೇ ನೈಜ ಅಧಿಕಾರ ಅಂತರ್ಗತ. ಈ ಅಧಿಕಾರವನ್ನು ರಾಜ್ಯಪಾಲರು ಗೌರವಿಸಬೇಕು. ಆಯಾ ರಾಜ್ಯದ ಮತದಾರರು ಆರಿಸಿದ ಸರ್ಕಾರಗಳನ್ನು ರಾಜ್ಯಪಾಲರು ಪುರಸ್ಕರಿಸಬೇಕು. ರಾಜ್ಯಪಾಲರ ಹುದ್ದೆ ಜನಾದೇಶಕ್ಕಿಂತ ದೊಡ್ಡದಲ್ಲ. ರಾಜ್ಯಪಾಲರ ಹುದ್ದೆಗಳನ್ನು ಅಲಂಕರಿಸುವವರು ಈ ದುರಹಂಕಾರವನ್ನು ತೊರೆಯಬೇಕು.

ತನ್ನ ಕಾಲಿಗೆ ತಾನೇ ಗುಂಡು ಹಾರಿಸಿಕೊಂಡ ಟ್ರಂಪ್; ಆಮದು ಸುಂಕದಲ್ಲಿ 96% ಹೊರೆ ಅಮೆರಿಕನ್ನರೇ ಹೊರುತ್ತಿದ್ದಾರೆ!

ಕೀಲ್ ಇನ್‌ಸ್ಟಿಟ್ಯೂಟ್ ಫಾರ್ ದಿ ವರ್ಲ್ಡ್ ಎಕಾನಮಿ ಸಂಸ್ಥೆ ನಡೆಸಿರುವ ಇತ್ತೀಚಿನ ಅಧ್ಯಯನವು ಟ್ರಂಪ್ ಅವರ ತುಘಲಕ್ ನಿರ್ಧಾರಗಳಿಂದ ಅಮೆರಿಕನ್ನರೇ ಹೆಚ್ಚು ಸಂಕಷ್ಟ ಎದುರಿಸುತ್ತಿದ್ದಾರೆ ಎಂಬುದನ್ನು ಬಹಿರಂಗಪಡಿಸಿದೆ. ಭಾರತ, ಬ್ರೆಜಿಲ್ ಸೇರಿದಂತೆ ಹಲವು ರಾಷ್ಟ್ರಗಳ ಮೇಲೆ ಟ್ರಂಪ್ ಹೇರಿರುವ ಆಮದು ಸುಂಕಗಳ ಬಹುತೇಕ ಸಂಪೂರ್ಣ, 96% ಹೊರೆಯನ್ನು ಅಮೆರಿಕದ ಗ್ರಾಹಕರೇ ಪಾವತಿಸುವಂತಾಗಿದೆ. ಹೆಚ್ಚಿನ ಸುಂಕವು ಅಮೆರಿನ್ನರನ್ನೇ ಬಾಧಿಸುತ್ತಿದೆ ಎಂದು ಅಧ್ಯಯನವು ವಿವರಿಸಿದೆ.



ಅಮರಿಕಗೆ ತಮ್ಮ ಸರಕುಗಳನ್ನು ರಫ್ತು ಮಾಡುತ್ತಿರುವ ರಾಷ್ಟ್ರಗಳು, ತಮ್ಮ ರಫ್ತು ಪ್ರಮಾಣವನ್ನು ಕಡಿಮೆ ಮಾಡಿವೆ. ಅಲ್ಲದೆ, ಅಮೆರಿಕ ವಿಧಿಸುತ್ತಿರುವ ಸುಂಕವನ್ನೂ ಸರಕುಗಳ ಬೆಲೆಯಲ್ಲಿಯೇ ಸೇರಿಸಿ ಮಾರಾಟ ಮಾಡುತ್ತಿದ್ದು, ಸುಂಕದ ಹೊರೆಯನ್ನು ಅಮೆರಿಕದ ಗ್ರಾಹಕರಿಗೆ ವರ್ಗಾಯಿಸುತ್ತಿವೆ. ಪರಿಣಾಮ, ಸುಂಕದ ಆರ್ಥಿಕ ಹೊರೆಯನ್ನು ಅಮೆರಿಕದ ಜನರು ಪಾವತಿಸುತ್ತಿದ್ದಾರೆ. ಇದು, ವಿದೇಶಿ ರಾಷ್ಟ್ರಗಳು ಹೆಚ್ಚುವರಿ ಸುಂಕದ ವೆಚ್ಚವನ್ನು ಭರಿಸುತ್ತವೆ ಎಂಬ ಟ್ರಂಪ್ ವಾದಕ್ಕೆ ತದ್ವಿರುದ್ಧವಾಗಿದೆ ಎಂದು ವರದಿ ತೋರಿಸಿದೆ.

ಅಮೆರಿಕ ಡೊನಾಲ್ಡ್ ಟ್ರಂಪ್ ಅವರು 2025ರ ಏಪ್ರಿಲ್‌ನಲ್ಲಿ ತಮ್ಮ ಲಿಬರೇಷನ್ ಡೇ (ವಿಮೋಚನಾ ದಿನ) ಘೋಷಣೆಯ ಸಂದರ್ಭದಲ್ಲಿ ಹಲವು ರಾಷ್ಟ್ರಗಳ ಮೇಲೆ ಆಮದು ಸುಂಕ ಘೋಷಿಸಿದರು. ಹಲವು ರಾಷ್ಟ್ರಗಳು ಅಮೆರಿಕದ ಉತ್ಪನ್ನಗಳ ಮೇಲೆ ಹೆಚ್ಚು ಆಮದು ಸುಂಕವನ್ನು ಹೇರುತ್ತಿವೆ. ಅಮೆರಿಕವನ್ನು ಅನ್ಯಾಯವಾಗಿ ನಡೆಸಿಕೊಳ್ಳುತ್ತಿವೆ. ಆದ್ದರಿಂದ, ನಾವೂ ಆಮದು ಸುಂಕವನ್ನು ಹೆಚ್ಚಿಸುತ್ತೇವೆ ಎಂದು ಪ್ರತಿಪಾದಿಸಿದ್ದರು.

ಭಾರತದ ಮೇಲೆ 25% ಸುಂಕ ಹೇರುವುದರ ಜೊತೆಗೆ, ಚೀನಾ 34%, ಯುರೋಪಿಯನ್ ಒಕ್ಕೂಟ 20%, ಜಪಾನ್ 24%, ಕಾಂಬೋಡಿಯಾ 49%, ಬಾಂಗ್ಲಾದೇಶ್ 37%, ಅಂಗೋಲಾ 32%, ಅಲ್ಜೀರಿಯಾ 30% ಹಾಗೂ ಇತರೆ ಹಲವು ದೇಶಗಳ ಮೇಲೆ 11% ರಿಂದ 50%ವರೆಗೆ ಸುಂಕ ಘೋಷಿಸಿದ್ದರು. ಇತ್ತೀಚೆಗೆ, ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುತ್ತಿರುವ ಕಾರಣಕ್ಕಾಗಿ ಭಾರತದ ಮೇಲೆ ದಂಡವನ್ನು 25% ಹೆಚ್ಚುವರಿ ಸುಂಕದೊಂದಿಗೆ 50%ಗೆ ಸುಂಕವನ್ನು ಹೆಚ್ಚಿಸಿದ್ದಾರೆ. ಅಲ್ಲದೆ, ಗ್ರೀನ್‌ಲ್ಯಾಂಡ್ ವಿಚಾರವಾಗಿ ನಡೆಯುತ್ತಿರುವ ವಿವಾದದಲ್ಲಿ ಅಮೆರಿಕವನ್ನು ವಿರೋಧಿಸುವ ರಾಷ್ಟ್ರಗಳ ಮೇಲೆ 25% ತೆರಿಗೆ ಹೇರುವುದಾಗಿಯೂ ಟ್ರಂಪ್ ಘೋಷಿಸಿದ್ದಾರೆ.

ಈ ಪ್ರಮಾಣದ ಸುಂಕವನ್ನು ಅಮೆರಿಕಗೆ ತಮ್ಮ ಉತ್ಪನ್ನಗಳನ್ನು ರಫ್ತು ಮಾಡುವ ರಾಷ್ಟ್ರಗಳೇ ಭರಿಸುತ್ತವೆ. ಈ ಸುಂಕಗಳು ಆಯಾ ರಾಷ್ಟ್ರಗಳಿಗೆ ಹೊರೆಯಾಗುತ್ತದೆ ಎಂದು ಟ್ರಂಪ್ ಭಾವಿಸಿದ್ದರು. ಆದರೆ, ಅಧ್ಯಯನ ವರದಿಯು ವ್ಯತಿರಿಕ್ತ ಸಂಗತಿಯನ್ನು ಬಹಿರಂಗಪಡಿಸಿದೆ. ಟ್ರಂಪ್ ಹೇರಿಸುವ ಸುಂಕದಲ್ಲಿ 96% ಹೊರೆಯನ್ನು ರಫ್ತು ಮಾಡುವ ರಾಷ್ಟ್ರಗಳ ಬದಲಿಗೆ ಅಮೆರಿಕದ ಗ್ರಾಹಕರೇ ಭರಿಸುತ್ತಿದ್ದಾರೆ ಎಂದು ತಿಳಿಸಿದೆ.

ಕೀಲ್ ಅಧ್ಯಯನವು 2024ರ ಜನವರಿಯಿಂದ 2025ರ ನವೆಂಬರ್‌ವರೆಗಿನ ಸುಮಾರು 4 ಲಕ್ಷ ಕೋಟಿ ಡಾಲರ್ (366 ಲಕ್ಷ ಕೋಟಿ ರೂ.) ಮೌಲ್ಯದ 2.5 ಕೋಟಿಗೂ ಹೆಚ್ಚು ಸರಕು ರವಾನೆಯ ದಾಖಲೆಗಳನ್ನು ವಿಶ್ಲೇಷಿಸಿದೆ. ಈ ವಿಶ್ಲೇಷಣೆಯಿಂದ ಕಂಡುಕೊಂಡ ಪ್ರಮುಖ ಅಂಶಗಳು ಹೀಗಿವೆ;

ಅಮೆರಿಕಗೆ ರಫ್ತು ಮಾಡುವ ಬೆಲೆಗಳು ಸ್ಥಿರವಾಗಿದ್ದರೂ, ಒಟ್ಟಾರೆ ವ್ಯಾಪಾರ ಪ್ರಮಾಣವು ಗಣನೀಯವಾಗಿ ಕುಸಿದಿದೆ.

ಭಾರತದ ಮೇಲೆ 50% ಸುಂಕ ಹೇರಿದ ನಂತರ, ಅಮೆರಿಕಗೆ ಆಗುತ್ತಿದ್ದ ರಫ್ತು ಪ್ರಮಾಣವು 24%ರಷ್ಟು ಕಡಿಮೆಯಾಗಿದೆ.

ರಫ್ತುದಾರರು ತಮ್ಮ ಮಾರಾಟ ಮತ್ತು ಬೆಲೆಗೆ ಧಕ್ಕೆಯಾಗದಂತೆ ತಡೆಯಲು ತಮ್ಮ ಸರಕುಗಳನ್ನು ಇತರ ಮಾರುಕಟ್ಟೆಗಳಿಗೆ ತಿರುಗಿಸುತ್ತಿದ್ದಾರೆ.

ಅಮೆರಿಕದಲ್ಲಿ ಮಾರಾಟವಾಗುವ ಇತರ ದೇಶಗಳ ಸರಕುಗಳ ಬೆಲೆಯಲ್ಲಿಯೇ ಅಮೆರಿಕದ ಸುಂಕವನ್ನೂ ಸೇರಿಸಿ ಮಾರಾಟ ಮಾಡುತ್ತಿದ್ದಾರೆ.

ಅಮೆರಿಕದಲ್ಲಿ ಬೇಡಿಕೆ-ಪೂರೈಕೆಯ ನಡುವಿನ ಅಂತರ ಹೆಚ್ಚಾಗಿ, ಸ್ಥಳೀಯವಾಗಿ ಹಲವು ಸರಕುಗಳ ಅಲಭ್ಯವಾಗಿವೆ. ಜೊತೆಗೆ, ಬೆಲೆಯೂ ಏರುತ್ತಿದೆ.

''ವಿದೇಶಿಯರು ಸುಂಕದ ರೂಪದಲ್ಲಿ ಅಮೆರಿಕಕ್ಕೆ ಸಂಪತ್ತನ್ನು ವರ್ಗಾಯಿಸುತ್ತಿದ್ದಾರೆ ಎಂಬುದು ಸುಳ್ಳು. ಅಮೆರಿಕಗೆ ಸರಕು ರಫ್ತು ಮಾಡುವ ರಾಷ್ಟ್ರಗಳು ಕೇವಲ 4%ರಷ್ಟು ಸುಂಕದ ವೆಚ್ಚವನ್ನು ಮಾತ್ರವೇ ಭರಿಸುತ್ತಿದ್ದಾರೆ. ಉಳಿದ 96% ವೆಚ್ಚವು ಅಮೆರಿಕದ ಗ್ರಾಹಕರ ಮೇಲೆ ಬಿದ್ದಿದೆ. ಅಲ್ಲಿನ ಜನರೇ ಈ ಪ್ರಮಾಣದ ಮೊತ್ತವನ್ನು ಪಾವತಿಸುತ್ತಿದ್ದಾರೆ. ಪರಿಣಾಮ, ಅಮೆರಿಕನ್ನರ ಜೀವನ ವೆಚ್ಚವು ಗಣನೀಯವಾಗಿ ಹೆಚ್ಚಾಗಿದೆ'' ಎಂದು ಕೀಲ್ ಸಂಸ್ಥೆಯ ಸಂಶೋಧನಾ ನಿರ್ದೇಶಕ ಜೂಲಿಯನ್ ಹಿಂಜ್ ಹೇಳಿದ್ದಾರೆ.

ಕೀಲ್ ಸಂಸ್ಥೆಯ ವಿಶ್ಲೇಷಣೆಯು, ಟ್ರಂಪ್ ವಾದಿಸುತ್ತಿದ್ದ ಆಮದು ಸುಂಕಗಳು ಅಮೆರಿಕದ ಉತ್ಪಾದನಾ ವಲಯಕ್ಕೆ ಮರುಜೀವ ನೀಡುತ್ತವೆ ಎಂಬ ಪ್ರತಿಪಾದನೆಯನ್ನು ಅಲ್ಲಗಳೆದಿದೆ. 2025ರ ಏಪ್ರಿಲ್ ಮತ್ತು ನವೆಂಬರ್ ನಡುವೆ ಅಮೆರಿಕವು 60,000 ಉತ್ಪಾದನಾ ಉದ್ಯೋಗಗಳನ್ನು ( ) ಕಳೆದುಕೊಂಡಿದೆ ಎಂಬ ಆಘಾತಕಾರಿ ಸತ್ಯವನ್ನು ಬಹಿರಂಗಪಡಿಸಿದೆ. ಟ್ರಂಪ್ ಅವರ ದುಬಾರಿ ಸುಂಕ ಹೇರುವ ಕ್ರಮಗಳು ಮುಂದುವರೆದರೆ, ಟ್ರಂಪ್ ಅವರ ಆಡಳಿತ ಸಾಮರ್ಥ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದು ಆರ್ಥಿಕ ತಜ್ಞರು ಹೇಳುತ್ತಿದ್ದಾರೆ.

ಇದು, ಕಳೆದ ವರ್ಷ ಅಮೆರಿಕದ ಕಸ್ಟಮ್ಸ್ ಆದಾಯವು ಸುಮಾರು 200 ಬಿಲಿಯನ್ ಡಾಲರ್‌ನಷ್ಟು ಹೆಚ್ಚಾಗಿದ್ದರೂ, ಅದರ ಹೊರೆಯನ್ನು ಗ್ರಾಹಕರೇ ಹೊತ್ತಿದ್ದಾರೆ. 2025ರ ಡಿಸೆಂಬರ್‌ನಲ್ಲಿ ಅಮೆರಿಕದ ಹಣದುಬ್ಬರವು 2.7% ತಲುಪಿದೆ. ಅಮೆರಿಕದ ಹಣದುಬ್ಬರ ಸ್ಥಿತಿ ಹೆಚ್ಚುತ್ತಿರುವುದಕ್ಕೆ ಟ್ರಂಪ್ ಅವರ ಸುಂಕ ನೀತಿಗಳೇ ಪ್ರಮುಖ ಕಾರಣಎಂದು ಫೆಡರಲ್ ರಿಸರ್ವ್ ಅಧ್ಯಕ್ಷ ಜೆರೋಮ್ ಪವೆಲ್ ಹೇಳಿದ್ದಾರೆ.

ಸದ್ಯಕ್ಕೆ, ಟ್ರಂಪ್ ಹೇರಿರುವ ಸುಂಕದ ವಿಚಾರವು ಅಮೆರಿಕದ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಟ್ರಂಪ್ ಆಡಳಿತವು ಅಂತಾರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರ ಕಾಯ್ದೆಯಡಿ ತನಗಿರುವ ಹಕ್ಕು ಮತ್ತು ತಾವು ತೆಗೆದುಕೊಂಡಿರುವ ನಿರ್ಧಾರಗಳನ್ನು ಸಮರ್ಥಿಸಿಕೊಂಡಿದೆ. ಆದರೆ, ಟ್ರಂಪ್ ಆಡಳಿತದ ವಾದದ ಕುರಿತು ನ್ಯಾಯಾಧೀಶರೊಬ್ಬರು ಸಂಶಯ ವ್ಯಕ್ತಪಡಿಸಿದ್ದಾರೆ. ನ್ಯಾಯಾಲಯವು ಯಾವ ತೀರ್ಪು ನೀಡಲಿದೆ ಎಂದು ಹಲವು ರಾಷ್ಟ್ರಗಳು ಎದುರು ನೋಡುತ್ತಿವೆ.

ಮುಂದುವರೆದ ತಮಿಳುನಾಡು ರಾಜ್ಯಪಾಲ ರವಿ ಮೊಂಡಾಟದ ವರ್ತನೆ: ಸುಪ್ರೀಂ ತಪರಾಕಿಗೂ ಬೆಲೆ ಇಲ್ಲವೇ?

ತಮಿಳುನಾಡು ರಾಜ್ಯಪಾಲ ರವಿ ಅವರು ವಿಪಕ್ಷ ನಾಯಕರಂತೆ ವರ್ತಿಸುವುದು ತೀವ್ರ ಟೀಕೆಗೆ ಗುರಿಯಾಗುತ್ತಿದೆ. ಈ ಹಿಂದೆ 10 ಮಸೂದೆಗಳನ್ನು ತಡೆಹಿಡಿದಿದ್ದರು. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ರವಿ ಅವರನ್ನು ತರಾಟೆಗೆ ತೆಗೆದುಕೊಂಡಿತ್ತು. ಇಷ್ಟಾದರೂ ರಾಜ್ಯಪಾಲರ ನಡೆ ಬದಲಾಗಿಲ್ಲ.



ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರಿಗೆ ಸುಪ್ರೀಂ ಕೋರ್ಟ್ ತಪರಾಕಿ ಹಾಕಿದ ನಂತರವೂ ಮೊಂಡಾಟದ ವರ್ತನೆ ಮುಂದುವರೆದಿದೆ. ರವಿ ಸಾಂಪ್ರದಾಯಿಕವಾಗಿ ರಾಜ್ಯ ಸರ್ಕಾರ ಸಿದ್ಧಪಡಿಸುವ ಭಾಷಣವನ್ನು ಓದಲು ನಿರಾಕರಿಸಿದ್ದಾರೆ ಹಾಗೂ ವಿಧಾನಸಭೆಯಿಂದ ಹೊರನಡೆದಿದ್ದಾರೆ. ಈ ಮೂಲಕ ತಮಿಳುನಾಡು ವಿಧಾನಸಭೆಯಲ್ಲಿ ಮತ್ತೆ ಹೈಡ್ರಾಮಾ ನಡೆದಿದೆ. ದೇಶವೇ ತಮಿಳುನಾಡಿನತ್ತ ನೋಡುವಂತಾಗಿದೆ.

ಅಷ್ಟಕ್ಕೂ ರವಿ ವರ್ತನೆ ಇದೇ ಮೊದಲೇನಲ್ಲ. 2023ರಿಂದಲೂ ಇದೇ ನಡೆದುಕೊಂಡು ಬಂದಿರುವುದು. ತಮಿಳುನಾಡು ರಾಜ್ಯಪಾಲರು ಭಾಷಣವನ್ನು ಓದಲು ನಿರಾಕರಿಸಿದ್ದು, ಇದು ಮೂರನೇ ಬಾರಿಗೆ ಮತ್ತು ವಿಧಾನಸಭೆಯಿಂದ ಹೊರನಡೆದಿರುವುದು ಇದು ಸತತ ನಾಲ್ಕನೇ ಬಾರಿಗೆ. ಈ ಹಿಂದೆ ಮಸೂದೆಗಳನ್ನು ತಡೆಹಿಡಿದಿದ್ದ ರವಿ ಅವರ ನಡೆಯನ್ನು ಸುಪ್ರೀಂ ಕೋರ್ಟ್ ಕಾನೂನುಬಾಹಿರ ಮತ್ತು ದೋಷಪೂರಿತ ಎಂದು ಕರೆದು ವಾಗ್ದಾಳಿ ನಡೆಸಿತ್ತು, ರವಿ ಅವರಿಗೆ ತಪರಾಕಿ ಹಾಕಿತ್ತು. ಆದರೂ ರಾಜ್ಯಪಾಲರ ಈ ವರ್ತನೆ ಮುಂದುವರೆದಿದೆ.

2023ರಲ್ಲಿ ಮೊದಲ ಬಾರಿಗೆ ವಿಧಾನಸಭೆಯಿಂದ ಸಭಾತ್ಯಾಗ

ಮೊದಲ ಬಾರಿಗೆ 2023ರ ಜನವರಿ 9ರಂದು ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ವಿಧಾನಸಭೆಯಿಂದ ಸಭಾತ್ಯಾಗ ಮಾಡಿದ್ದು, ಈ ಘಟನೆ ರಾಷ್ಟ್ರಮಟ್ಟದಲ್ಲಿ ಭಾರಿ ಚರ್ಚೆಗೆ ಕಾರಣವಾಗಿತ್ತು. ವರ್ಷದ ಮೊದಲ ಅಧಿವೇಶನದಲ್ಲಿ ರಾಜ್ಯಪಾಲರು ಸರ್ಕಾರ ಸಿದ್ಧಪಡಿಸಿದ್ದ ಭಾಷಣದ ಕೆಲವು ಭಾಗಗಳನ್ನು ಓದದೆ ಕೈಬಿಟ್ಟಿದ್ದರು. ದ್ರಾವಿಡ ನಾಯಕರಾದ ಪೆರಿಯಾರ್, ಅಣ್ಣಾದೊರೈ, ಕಾಮರಾಜ್ ಮತ್ತು ಅಂಬೇಡ್ಕರ್ ಹೆಸರು, ದ್ರಾವಿಡ ಮಾದರಿ ಎಂಬ ಉಲ್ಲೇಖಗಳನ್ನು ಓದಿರಲಿಲ್ಲ.

ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಎಂ ಕೆ ಸ್ಟಾಲಿನ್ ರಾಜ್ಯಪಾಲರು ತಮಗೆ ಇಷ್ಟಬಂದಂತೆ ಭಾಷಣದ ಭಾಗಗಳನ್ನು ಕೈಬಿಟ್ಟಿರುವುದನ್ನು ವಿರೋಧಿಸಿ ತಕ್ಷಣವೇ ನಿರ್ಣಯವೊಂದನ್ನು ಮಂಡಿಸಿದ್ದರು. ಸರ್ಕಾರ ಸಿದ್ಧಪಡಿಸಿದ ಪೂರ್ಣ ಭಾಷಣವನ್ನೇ ಅಧಿಕೃತ ದಾಖಲೆಗೆ ಸೇರಿಸಬೇಕೆಂದು ಎಂದು ಒತ್ತಾಯಿಸಿದ್ದರು. ನಿರ್ಣಯ ಮಂಡಿಸುತ್ತಿದ್ದಂತೆಯೇ ಸಿಟ್ಟುಗೆದ್ದ ರಾಜ್ಯಪಾಲ ರವಿ ರಾಷ್ಟ್ರಗೀತೆಗೂ ಕಾಯದೆ ಸದನದಿಂದ ಹೊರನಡೆದಿದ್ದರು. ತಮಿಳುನಾಡು ವಿಧಾನಸಭೆಯ ಇತಿಹಾಸದಲ್ಲೇ ರಾಜ್ಯಪಾಲರೊಬ್ಬರು ಮೊದಲ ಬಾರಿಗೆ ಸಭಾತ್ಯಾಗ ಮಾಡಿದ ಘಟನೆ ಇದಾಗಿದ್ದರಿಂದ ತೀವ್ರ ಚರ್ಚೆಗೆ ಒಳಗಾಗಿತ್ತು.

2024ರಲ್ಲಿ ಒಂದೇ ಭಾಗ ಓದಿ ಸಭಾತ್ಯಾಗ!

2024ರ ಫೆಬ್ರವರಿ 12ರಂದು ನಡೆದ ವರ್ಷದ ಮೊದಲ ಜಂಟಿ ಅಧಿವೇಶನದಲ್ಲಿ ಆರ್.ಎನ್. ರವಿ ಅವರು ತಮಿಳುನಾಡು ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ಸಂಪೂರ್ಣವಾಗಿ ಓದದೆ ಸಭಾತ್ಯಾಗ ಮಾಡಿದ್ದರು. ಕೇವಲ ಮೊದಲ ಪ್ಯಾರಾಗ್ರಾಫ್ ಮಾತ್ರ ಓದಿದ್ದರು. ಈ ಭಾಷಣದಲ್ಲಿ ತಪ್ಪು ಮಾಹಿತಿಯಿದೆ ಎಂದು ಆರೋಪಿಸಿದ್ದರು. ಹಾಗೆಯೇ ಅಧಿವೇಶನದ ಆರಂಭದಲ್ಲಿ ಮತ್ತು ಕೊನೆಯಲ್ಲಿ ರಾಷ್ಟ್ರಗೀತೆಯನ್ನು ಹಾಡಬೇಕೆಂಬ ತಮ್ಮ ವಿನಂತಿಯನ್ನು ಸರ್ಕಾರ ನಿರ್ಲಕ್ಷಿಸಿದೆ ಎಂದು ಹೇಳಿಕೊಂಡು ವಿಪಕ್ಷ ನಾಯಕರಂತೆ ವರ್ತಿಸಿ ಸಭಾತ್ಯಾಗ ಮಾಡಿದ್ದರು. ಈ ವೇಳೆ ರಾಜ್ಯಪಾಲರ ಈ ವರ್ತನೆಯ ಪುನರಾವರ್ತನೆಯು ತೀವ್ರ ಟೀಕೆಗೆ ಗುರಿಯಾಗಿತ್ತು.

2025ರಲ್ಲಿ ಭಾಷಣವೇ ಓದದೆ ಸಭಾತ್ಯಾಗ!

2025ರಲ್ಲಿಯೂ ಇದೇ ರೀತಿ ಆರ್.ಎನ್. ರವಿ ವರ್ತಿಸಿದ್ದರು. ಜನವರಿ 6ರಂದು ನಡೆದ ಮೊದಲ ಅಧಿವೇಶನದಲ್ಲಿ ಸಾಂಪ್ರದಾಯಿಕ ಭಾಷಣವನ್ನು ಓದದೆಯೇ ಸಭಾತ್ಯಾಗ ಮಾಡಿದ್ದರು. ತಮಿಳುನಾಡು ವಿಧಾನಸಭೆಯ ಸಂಪ್ರದಾಯದಂತೆ ಆರಂಭದಲ್ಲಿ ತಮಿಳು ತಾಯಿ ವಾಳ್ತು (ರಾಜ್ಯ ಗೀತೆ) ಮತ್ತು ಕೊನೆಯಲ್ಲಿ ರಾಷ್ಟ್ರಗೀತೆಯನ್ನು ಹಾಡಲಾಗುತ್ತದೆ. ಆದರೆ ಅಧಿವೇಶನದ ಆರಂಭದಲ್ಲೇ ರಾಷ್ಟ್ರಗೀತೆಯನ್ನು ಹಾಡಬೇಕು ಎಂಬ ರಾಜ್ಯಪಾಲರ ವಿನಂತಿಯನ್ನು ಸರ್ಕಾರ ತಿರಸ್ಕರಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು. ಹಾಗೆಯೇ ಸರ್ಕಾರ ಸಿದ್ಧಪಡಿಸಿದ ಭಾಷಣದಲ್ಲಿ ಅನೇಕ ತಪ್ಪುಗಳಿವೆ, ಸತ್ಯಕ್ಕೆ ದೂರವಾಗಿದೆ ಎಂದು ಆರೋಪಿಸಿ ಓದಲು ನಿರಾಕರಿಸಿದ್ದರು. ರಾಷ್ಟ್ರಗೀತೆಗೆ ಗೌರವ ನೀಡದಿರುವುದು ಸಂವಿಧಾನ ವಿರೋಧಿ ಎಂದೂ ಹೇಳಿಕೆ ನೀಡಿದ್ದರು. ಆದರೆ ರಾಜ್ಯಪಾಲರ ಈ ಮೊಂಡಾಟದ ನಡೆಯನ್ನು ಸಿಎಂ ಸ್ಟಾಲಿನ್ ಮಕ್ಕಳಾಟಿಕೆ ಎಂದು ಟೀಕಿಸಿದ್ದರು. ಇದು ಸಂವಿಧಾನದ ಆಶಯಕ್ಕೆ ವಿರುದ್ಧವಾದುದ್ದು ಎಂದು ಖಂಡಿಸಿದ್ದರು.

2026ರಲ್ಲಿಯೂ ಅದೇ ವರ್ತನೆ ಪುನರಾವರ್ತನೆ!

2026ರ ಜನವರಿ 20ರಂದು ನಡೆದ ತಮಿಳುನಾಡು ವಿಧಾನಸಭೆಯ ಅಧಿವೇಶನದಲ್ಲಿ ರಾಜ್ಯಪಾಲ ರವಿ ಅವರು ಮತ್ತೆ ಸರ್ಕಾರದ ಭಾಷಣವನ್ನು ಓದದೆ ಸಭಾತ್ಯಾಗ ಮಾಡಿದ್ದಾರೆ. ಅಧಿವೇಶನದ ಆರಂಭದಲ್ಲಿ ತಮಿಳು ನಾಡಗೀತೆಯ ನಂತರ ರಾಷ್ಟ್ರಗೀತೆಯನ್ನು ಹಾಡಲು ಅವಕಾಶ ನೀಡದೆ ಇದು ಸಂವಿಧಾನಕ್ಕೆ ಮಾಡಿದ ಅಪಮಾನ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ''ಡಿಎಂಕೆ ಸರ್ಕಾರ ಸಿದ್ಧಪಡಿಸಿದ ಭಾಷಣದಲ್ಲಿ ಸುಳ್ಳು ಮಾಹಿತಿ ಮತ್ತು ಆಧಾರರಹಿತ ಹೇಳಿಕೆಗಳಿವೆ'' ಎಂದು ಆರೋಪಿಸಿ ಭಾಷಣವನ್ನು ಓದಲು ನಿರಾಕರಿಸಿದ್ದರು. ಅಷ್ಟು ಮಾತ್ರವಲ್ಲದೆ ಭಾಷಣದ ವೇಳೆ ತಮ್ಮ ಮೈಕ್ರೋಫೋನ್ ಅನ್ನು ಪದೇ ಪದೇ ಆಫ್ ಮಾಡಲಾಗಿತ್ತು ಎಂದು ರಾಜ್ಯಪಾಲರ ಕಚೇರಿ ದೂರಿದೆ. ರಾಜ್ಯಪಾಲರು ಸತತ ನಾಲ್ಕನೇ ಬಾರಿಗೆ ಈ ರೀತಿ ನಡೆದುಕೊಂಡಿರುವುದನ್ನು ಸ್ಟಾಲಿನ್, ''ವಿಧಾನಸಭೆಗೆ ಮಾಡಿದ ಅಪಮಾನ'' ಎಂದು ಟೀಕಿಸಿದ್ದಾರೆ. ಹಾಗೆಯೇ ಅಧಿವೇಶನದ ಆರಂಭದಲ್ಲಿ ರಾಜ್ಯಪಾಲರ ಭಾಷಣದ ಕಡ್ಡಾಯ ನಿಯಮವನ್ನು ತೆಗೆದುಹಾಕಲು ಸಂವಿಧಾನ ತಿದ್ದುಪಡಿ ತರುವ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ.

ಹೀಗೆ ರಾಜ್ಯಪಾಲರು ವಿಪಕ್ಷ ನಾಯಕರಂತೆ ವರ್ತಿಸುವುದು ತೀವ್ರ ಟೀಕೆಗೆ ಗುರಿಯಾಗುತ್ತಿದೆ. ಈ ಹಿಂದೆ 10 ಮಸೂದೆಗಳನ್ನು ರವಿ ತಡೆಹಿಡಿದಿದ್ದರು. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ರವಿ ಅವರನ್ನು ತರಾಟೆಗೆ ತೆಗೆದುಕೊಂಡಿತ್ತು. ರಾಜ್ಯಪಾಲರ ಈ ಕ್ರಮ ಕಾನೂನುಬಾಹಿರ ಎಂದು ಹೇಳಿತ್ತು. ಮಸೂದೆಗಳು ಮೂರು ವರ್ಷಗಳಿಂದ ಬಾಕಿ ಉಳಿದಿದ್ದನ್ನು ಪ್ರಶ್ನಿಸಿದ ನ್ಯಾಯಾಲಯ, ''ಮೂರು ವರ್ಷಗಳ ಕಾಲ ರಾಜ್ಯಪಾಲರು ಏನು ಮಾಡುತ್ತಿದ್ದರು? ಸುಪ್ರೀಂ ಕೋರ್ಟ್ ನೋಟಿಸ್ ನೀಡಿದ ನಂತರವೇ ಅವರು ಮಸೂದೆಗಳನ್ನು ವಾಪಸ್ ಕಳುಹಿಸಿದ್ದಾರೆಯೇ?'' ಎಂದು ತೀವ್ರವಾಗಿ ಪ್ರಶ್ನಿಸಿತ್ತು. ಆ 10 ಮಸೂದೆಗಳನ್ನು ''ಅಂಗೀಕೃತ'' ಎಂದು ಪರಿಗಣಿಸಲು ಆದೇಶಿಸಿತ್ತು. ಇದು ರಾಜ್ಯಪಾಲರಿಗೆ ತೀವ್ರ ಮುಖಭಂಗ ಉಂಟು ಮಾಡಿತ್ತು.

ಇಷ್ಟಾದರೂ ರಾಜ್ಯಪಾಲರ ನಡೆ ಬದಲಾಗಿಲ್ಲ. ತಮಿಳುನಾಡು ಸರ್ಕಾರದ ವಿರುದ್ಧವಾಗಿ ಒಂದಲ್ಲ ಒಂದು ರೀತಿಯಲ್ಲಿ ಪ್ರಹಾರ ನಡೆಸುತ್ತಲೇ ಇದ್ದಾರೆ. ತಮಿಳುನಾಡಿನಲ್ಲಿ ರಾಜ್ಯಪಾಲರು ಮತ್ತು ಚುನಾಯಿತ ಸರ್ಕಾರದ ನಡುವಿನ ಸಂಘರ್ಷವು ಕೇವಲ ರಾಜಕೀಯವಲ್ಲದೆ, ಇದು ಸದ್ಯ ಗಂಭೀರ ಸಾಂವಿಧಾನಿಕ ಬಿಕ್ಕಟ್ಟಾಗಿ ಮಾರ್ಪಟ್ಟಿದೆ. ಅಷ್ಟು ಮಾತ್ರವಲ್ಲದೆ ಈ ಬಿಕ್ಕಟ್ಟು ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರದಿಂದ ನೇಮಕಗೊಂಡ ರಾಜ್ಯಪಾಲರು, ರಾಜ್ಯದ ಜನರಿಂದ ಆಯ್ಕೆಯಾದ ಸರ್ಕಾರದ ನಡುವಿನ ಅಧಿಕಾರ ಹಂಚಿಕೆಯ ಬಗ್ಗೆ ಹೊಸ ಚರ್ಚೆಗಳನ್ನೂ ಹುಟ್ಟುಹಾಕಿದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR